# ಪರಿಚಯ

## ಶೀರ್ಷಿಕೆ

“ಆದಿಕಾಂಡ”ವು ಇಬ್ರಿಯ ಶಾಸ್ತ್ರಗಳಲ್ಲಿನ ಪ್ರಥಮ ಪುಸ್ತಕದ ಶೀರ್ಷಿಕೆ ಆಗಿರುತ್ತದೆ. ಆಂಗ್ಲದ ಶೀರ್ಷಿಕೆಯು ಲ್ಯಾಟಿನ್ ವಲ್ಗೇಟನಲ್ಲಿರುವ ಜೆನಿಸಿಸ್ ಎಂಬುದರಿಂದ ಬಂದಿರುತ್ತದೆ, ಅದು ಸೆಪ್ಟುಜಿಂಟನಲ್ಲಿನ[1] γένεσις ಎಂಬುದರ ಲಿಪ್ಯಂತರಣವಾಗಿರುತ್ತದೆ. ಒಂದು ಕೃತಿಯಲ್ಲಿನ ಮೊದಲ ಅಕ್ಷರದ ಪ್ರಕಾರ ಪರಿಶುದ್ಧ ಬರಹಗಳಿಗೆ ಹೆಸರನ್ನಿಡುವದು ಯೆಹೂದ್ಯರಲ್ಲಿನ ಆಚಾರವಾಗಿತ್ತು; ಆದದರಿಂದ ಪುಸ್ತಕದ ಇಬ್ರಿಯ ಭಾಷೆಯ ಹೆಸರು בְּרֵאשִׁית *(ಬೆರೆಶಿತ್)* ಎಂದಾಗಿದೆ, ಇದು ಸಂಪ್ರದಾಯಿಕವಾಗಿ “ಆದಿಯಲ್ಲಿ” ಎಂಬ ಅರ್ಥವು ಬರುವ ಹಾಗೆ ಅರ್ಥನಿರೂಪಣೆ ಮಾಡಲ್ಪಟ್ಟಿರುತ್ತದೆ.

## ಕರ್ತೃತ್ವ ಮತ್ತು ದಿನಾಂಕ

ಆದಿಕಾಂಡದ ವಿಷಯವಾಗಿ ಕರ್ತೃತ್ವ ಮತ್ತು ದಿನಾಂಕದ ಚರ್ಚೆಯಾಂಶಗಳು ಕಠಿಣತೆಯ ಮಂಡಲದೊಳಗೆ ಪ್ರವೇಶಿಸುತ್ತವೆ. ಲೇಖಕನು ಯಾರು ಅಥವಾ ಆತನು ಅದನ್ನು ಯಾವಾಗ ಬರೆದನು ಎಂಬುದರ ಕುರಿತು ಪುಸ್ತಕವು ನಮಗೆ ಏನನ್ನೂ ತಿಳಿಸುವದಿಲ್ಲ. ಪ್ರಾಚೀನ ಲೇಖಕರು ತಮ್ಮ ವಿಷಯಗಳನ್ನು ಒಟ್ಟುಗೂಡಿಸಿಕೊಳ್ಳಲು ವಿವಿಧ ಮೂಲಗಳನ್ನು ಬಳಸಿದರೆಂಬುದನ್ನು ನಾವು ಹಳೆಯ ಒಡಂಬಡಿಕೆಯ ಹಲವಾರು ವಾಕ್ಯಭಾಗಗಳಿಂದ ಬಲ್ಲೆವು. ಲೇಖಕರು ಕ್ಯಾನೋನಿಕರಣಕ್ಕೊಳಪಡದ ಬರಹಗಳಿಂದ ಸಹ ಉಲ್ಲೇಖಿಸುತ್ತಿದ್ದರು: ಅರಣ್ಯಕಾಂಡ 21:14, 15ರಲ್ಲಿ, ಲೇಖಕನು “ಕರ್ತನ ಯುದ್ಧಗಳ ಪುಸ್ತಕ”ದಿಂದ ಉಲ್ಲೇಖಿಸಿದ್ದಾನೆ; ಮತ್ತು ಯೆಹೋಶುವ 10:13ರಲ್ಲಿ, ಲೇಖಕನು ಯೆಹೋಶುವನ ದೀರ್ಘವಾದ ಹಗಲಿನ ಕುರಿತಾಗಿ “ಜಾಶೇರನ ಪುಸ್ತಕ” ಎಂಬುದರಿಂದ ಒಂದು ಹೇಳಿಕೆಯನ್ನು ತೆಗೆದುಕೊಂಡು ಉಲ್ಲೇಖಿಸಿದನು. ಅಷ್ಟುಮಾತ್ರವಲ್ಲದೆ, 2 ಸಮುವೇಲ ಪುಸ್ತಕದ ಲೇಖಕನು ಅರಸನಾದ ಸೌಲನ ಹಾಗೂ ಆತನ ಪುತ್ರರ ಮರಣದ ವಿಷಯದಲ್ಲಿ ದಾವೀದನು ಶೋಕಗೀತೆಯನ್ನು ಸಹ “ಜಾಶೇರ ಪುಸ್ತಕ”ದಿಂದಲೇ ಆರಿಸಿಕೊಂಡದ್ದಾಗಿ ಹೇಳುತ್ತಾನೆ (2 ಸಮುವೇಲ 1:18–27). 1, 2 ಅರಸುಗಳು, 1, 2 ಪೂರ್ವಕಾಲವೃತ್ತಾಂತಗಳು; ಎಜ್ರನು; ಮತ್ತು ನೆಹಮೀಯ ಪುಸ್ತಕಗಳ ಲೇಖಕರು ಈ ಪುಸ್ತಕಗಳನ್ನು ಬರೆಯುವ ವೇಳೆ ಅನೇಕ ಮೂಲಗಳಿಂದ ವಿಷಯಗಳನ್ನು ಆಯ್ದುಕೊಂಡಿದ್ದರು.

ಹೊಸ ಒಡಂಬಡಿಕೆಯಲ್ಲಿ, ಲೂಕನಿಗೆ ಕ್ರಿಸ್ತನ ಜೀವಿತದ ಬಗ್ಗೆ ಕಣ್ಣಾರೆ ನೋಡಿದ ತಿಳುವಳಿಕೆಯು ಇರಲಿಲ್ಲ, ಆದರೆ ತನ್ನ ಸುವಾರ್ತೆಯ ಕಥನವನ್ನು ಒಟ್ಟುಗೂಡಿಸುವದರಲ್ಲಿ ಮೌಖಿಕ ಹಾಗೂ ಲಿಖಿತ ಮೂಲಗಳನ್ನು ಬಳಸಿಕೊಂಡನೆಂಬುದನ್ನು ತಿಳಿಯಪಡಿಸುತ್ತಾನೆ (ಲೂಕ 1:1–4). ಇದು ಸ್ಪಷ್ಟವಾಗಿ ಕಾಣಿಸುತ್ತದೆ, ಏನೆಂದರೆ ಲೇಖಕರು ಘಟನೆಗಳಿಗೆ ಪ್ರತ್ಯಕ್ಷ ಸಾಕ್ಷಿಗಳಾಗಿಲ್ಲದೆ ಇದ್ದ ವೇಳೆ ಮತ್ತು ದೇವರಿಂದ ನೇರವಾಗಿ ಪ್ರಕಟನೆಯನ್ನು ಪಡೆದುಕೊಳ್ಳದೆ ಇದ್ದ ವೇಳೆ (ಪ್ರವಾದಿಗಳ ಹಾಗೆ), ಶಾಸ್ತ್ರಗಳನ್ನು ಬರೆಯುವದರಲ್ಲಿ ಬೇರೊಂದು ಮೂಲಗಳಿಂದ ವಿಷಯಗಳನ್ನು ಸಂಗ್ರಹಿಸಿಕೊಳ್ಳುವಂತೆ ಕೆಲವು ಸಾರಿ ಪವಿತ್ರಾತ್ಮನು ಅವರಿಗೆ

ಅನುಮತಿಸಿದನು.

ಆದಿಕಾಂಡ ಪುಸ್ತಕದ ಲೇಖನನ್ನು ಪ್ರೇರಿಸಿದವನು ದೇವರೇ ಆಗಿದ್ದನು, ಮತ್ತು ಪುಸ್ತಕವು ನಂತರ ಬರಲಿದ್ದ ಎಲ್ಲಾ ಸಂತತಿಯವರಿಗೋಸ್ಕರ ಸಂರಕ್ಷಿಸಿಡಲ್ಪಟ್ಟಿತು. ಆದಿಕಾಂಡದ ಕರ್ತೃತ್ವದ ವಿಷಯದಲ್ಲಿ, ಅತ್ಯಂತ ಆರಂಭಿಕ ಯೆಹೂದಿ ಸಂಪ್ರದಾಯವು ಹೇಳುವದೇನೆಂದರೆ "ಮೋಶೆಯು ಸೀನಾಯಿ ಪರ್ವತದ ಮೇಲೆ ಧರ್ಮಶಾಸ್ತ್ರವನ್ನು ಪಡೆದುಕೊಂಡನು" ಎಂಬದೆ.[2] ಧರ್ಮಶಾಸ್ತ್ರವು ಬೈಬಲಿನ ಮೊದಲ ಪುಸ್ತಕವನ್ನೊಳಗೊಂಡಿರುವದು ಮಾತ್ರವೇ ಅಲ್ಲ, ಆದರೆ ಉಳಿದ ಪಂಚಪುಸ್ತಕಗಳನ್ನು - ವಿಮೋಚನಕಾಂಡ, ಯಾಜಕಕಾಂಡ, ಅರಣ್ಯಕಾಂಡ, ಧರ್ಮೋಪದೇಶಕಾಂಡ[3] - ಸಹ ಒಳಗೊಂಡಿರುತ್ತದೆಂದು ಅರ್ಥಮಾಡಿಕೊಳ್ಳಲಾಗಿತ್ತು. ಈ ಸಂಗ್ರಹಕ್ಕೆ ಬೈಬಲಿನ ಹಲವಾರು ವಾಕ್ಯಭಾಗಗಳಲ್ಲಿ "ಮೋಶೆಯ ಧರ್ಮಶಾಸ್ತ್ರ [ಅಥವಾ ಪುಸ್ತಕ]" ಎಂದು ಕರೆಯಲಾಗಿರುತ್ತದೆ.[4]

ಮೋಶೆಯ ಬಳಿಯಲ್ಲಿ ಖಂಡಿತವಾಗಿಯೂ ಪಂಚಪುಸ್ತಕಗಳನ್ನು ಬರೆಯಲು ಸಮಯವಿತ್ತು, ಯಾಕೆಂದರೆ ಆತನು ಇಸ್ರಾಯೇಲ್ಯರ ಜೊತೆಯಲ್ಲಿ ಅರಣ್ಯದೊಳಗೆ ನಾಲ್ವತ್ತು ವರ್ಷಗಳನ್ನು ಕಳೆದನು. ಅಲ್ಲದೆ ಈ ಕೆಲಸವನ್ನು ಮಾಡುವದಕ್ಕಾಗಿ ಆತನಿಗೆ ಶೈಕ್ಷಣಿಕ ಹಿನ್ನಲೆಯು ಸಹ ಇತ್ತು, ಆತನು "ಐಗುಪ್ತದೇಶದವರ ಸರ್ವವಿದ್ಯೆಗಳಲ್ಲಿಯೂ ಉಪದೇಶಹೊಂದಿ"ದ ವ್ಯಕ್ತಿಯಾಗಿದ್ದನು (ಅಪೊಸ್ತಲರ ಕೃತ್ಯಗಳು 7:22). ಒಬ್ಬ ಅತ್ಯಂಥ ಸರ್ವೋಚ್ಛ ಪ್ರವಾದಿಯಾಗಿ (ಧರ್ಮೋಪದೇಶಕಾಂಡ 34:9, 10), ಆತನು ನಿಶ್ಚಯವಾಗಿಯೂ ದೇವರಿಂದ ಅನೇಕ ಕಟ್ಟಳೆಗಳನ್ನು ಮತ್ತು ಉಪದೇಶವನ್ನು ಪಡೆದವನಾಗಿ ಅವುಗಳನ್ನು ಬರೆದಿಟ್ಟನು (ನೋಡಿರಿ ವಿಮೋಚನಕಾಂಡ 24:4; ಧರ್ಮೋಪದೇಶಕಾಂಡ 31:9). ಅದರ ಜೊತೆಗೆ, ಇಸ್ರಾಯೇಲ್ಯರು ಎಲ್ಲೆಲ್ಲಿ ಉಳಿದುಕೊಂಡರೋ ಆ ಸ್ಥಳಗಳ ಕುರಿತಾದ ಒಂದು ಪ್ರಯಾಣ ದಿನಚರಿಯನ್ನು ಮತ್ತು ಆ ಸ್ಥಳಗಳಲ್ಲಿ ಸಂಭವಿಸಿದಂತಹ ಕೆಲವೊಂದು ಘಟನೆಗಳನ್ನು ಬರೆದಿಟ್ಟುಕೊಂಡನು (ವಿಮೋಚನಕಾಂಡ 17:14; ಅರಣ್ಯಕಾಂಡ 33:2-37), ಮಾತ್ರವಲ್ಲದೆ ಕನಿಷ್ಠ ಒಂದು ಹಾಡನ್ನು ಬರೆದು ಸಂರಕ್ಷಿಸಿರುತ್ತಾನೆ (ಧರ್ಮೋಪದೇಶಕಾಂಡ 31:22). ಕೀರ್ತನೆಗಳು 90ನ್ನು ಸಹ ಆತನೇ ಬರೆದಿರುವನೆಂದು ಹೇಳಲಾಗಿರುತ್ತದೆ. ಹೇಗೂ, ಪಂಚಪುಸ್ತಕಗಳಿಗೆ ಮೋಶೆಯು ನೀಡಿರುವ ಕೊಡುಗೆಗಳು ಆತನವುಗಳೆಂದು ಹೇಳಲಾಗಿರುವ ಶಾಸ್ತ್ರಗಳ ಭಾಗಗಳಿಗೆ ಮಾತ್ರವೇ ಸೀಮಿತಗೊಳಿಸುವ ಅಗತ್ಯವಿರುವದಿಲ್ಲ, ಯಾಕೆಂದರೆ ಒಬ್ಬ ಪ್ರತ್ಯಕ್ಷ ಸಾಕ್ಷಿ ಮತ್ತು ಬಹುಪಾಲು ಘಟನೆಗಳಲ್ಲಿ ಸ್ವತಃ ಭಾಗಿಯಾದವನಾಗಿ, ಆತನ ಮಾತುಗಳು ಯೆಹೂದ್ಯರಿಗೆ ಸ್ವಾಭಾವಿಕವಾಗಿಯೇ ಬಹಳಷ್ಟು ಆಧಾರಪೂರ್ವಕವಾಗಿರುತ್ತಿದ್ದವು.

ಕೆಲವೊಂದು ವಿಷಯಗಳನ್ನು ಬರೆದವನೆಂದು ಮೋಶೆಯನ್ನು ಸೂಚಿಸುವಂತಹ ಪಂಚಪುಸ್ತಕಗಳಿಗೆ ತದ್ವಿರುದ್ಧವಾಗಿ, ಆತನು ಆದಿಕಾಂಡದ ಯಾವದೇ ಭಾಗವನ್ನಾದರೂ ಬರೆದವನೆಂದು ವಾಸ್ತವಿಕದಲ್ಲಿ ಯಾವ ವಾಕ್ಯಭಾಗವೂ ಸೂಚಿಸುವದಿಲ್ಲ. ಅಷ್ಟುಮಾತ್ರವಲ್ಲದೆ, ಆದಿಕಾಂಡದಲ್ಲಿರುವ ಕೆಲವು ವಾಕ್ಯಗಳು ಮೋಶೆಯ ಕಾಲಕ್ಕಿಂತಲೂ ನಂತರದ ಕಾಲಕ್ಕೆ ಸೇರಿದವುಗಳೆಂದು ತೋರುತ್ತವೆ. ಉದಾಹರಣೆಗೆ, ಕಾನಾನ್ ದೇಶದ ಶೆಕೆಮ್ ಎಂಬ ಸ್ಥಳಕ್ಕೆ ಬಂದು ಸೇರುವದನ್ನು ಬಣ್ಣಿಸುವದರಲ್ಲಿ, ಲೇಖಕನು "ಆ ಕಾಲದಲ್ಲಿ ಕಾನಾನ್ಯರು ದೇಶದಲ್ಲಿದ್ದರು" ಎಂಬ ಮಾತುಗಳನ್ನು ಬಳಕೆ ಮಾಡುತ್ತಾನೆ (ಆದಿಕಾಂಡ 12:6). ಆ ಅಭಿಪ್ರಾಯದ ಲೇಖಕ/ಸಂಪಾದಕನು ಮೋಶೆಯು ಜೀವಿಸಿದ್ದ ಕಾಲದ ನಂತರದಲ್ಲಿ, ಕಾನಾನರು ಈಗ ವಾಗ್ದಾನ ದೇಶದಲ್ಲಿ ನೆಲೆಸಿರದ ಮತ್ತು ಆಕ್ರಮಿಸಿಕೊಂಡಿರದ ಸಮಯದಲ್ಲಿ ಜೀವಿಸಿದ್ದವನು

ಎಂಬುದನ್ನು ಈ ಹೇಳಿಕೆಯು ಸೂಚಿಸುವಂತೆ ಕಾಣಿಸುತ್ತದೆ.

ಇನ್ನೊಂದು ವಾಕ್ಯಭಾಗವು ಮೆಸಪೊಟೇಮ್ಯದ ನಾಲ್ವರು ಅರಸರುಗಳು ಯೋರ್ದಾನಿನ ಕಣಿವೆಯ ಮೇಲೆ ದಾಳಿ ಮಾಡುವದನ್ನು ಸೂಚಿಸುತ್ತದೆ. ಅಬ್ರಹಾಮನು ಅವರನ್ನು ತನ್ನ ಖಾಸಗಿ ಸೈನ್ಯವನ್ನು ಬಳಸಿ ಪರಾಜಯಗೊಳಿಸಿದನು ಮತ್ತು ಅವರನ್ನು "ದಾನೂರಿನವರೆಗೆ ಹಿಂದಟ್ಟಿದನು" ಎಂದು ಅದು ಹೇಳುತ್ತದೆ (14:14). ಹೇಗೂ, ನ್ಯಾಯಸ್ಥಾಪಕರು ಪುಸ್ತಕದ ಲೇಖಕನ ಪ್ರಕಾರವಾಗಿ, ಆ ಪಟ್ಟಣದ ಮುಂಚಿನ ಹೆಸರು ಲಯಿಷಿ; ಅದನ್ನು ಅನಂತರದ ನ್ಯಾಯಸ್ಥಾಪಕರ ಕಾಲವಾಧಿಯಲ್ಲಿ ದಾನ್ ಕುಲದವರು ಸ್ವಾಧೀನಪಡಿಸಿಕೊಂಡ ನಂತರವಷ್ಟೇ ಅದಕ್ಕೆ "ದಾನ್" ಎಂದು ಹೆಸರಿಡಲ್ಪಟ್ಟಿತ್ತು (ನ್ಯಾಯಸ್ಥಾಪಕರು 18:27-29).

ಬಹಳ ಕಾಲದ ವರೆಗೆ, ಈ ವಾಕ್ಯಭಾಗಗಳಲ್ಲಿ ಕಾಲದ ತಪ್ಪೆಣಿಕೆಗಳೆಂದು ಕಾಣಿಸುವಂತವುಗಳು, ಆದಿಕಾಂಡದಲ್ಲಿನ ಇದೇ ರೀತಿಯ ಇತರ ಹೇಳಿಕೆಗಳಲ್ಲಿರುವಂತೆಯೇ ಗುರುತಿಸಲ್ಪಟ್ಟಿವೆ (ಉದಾಹರಣೆಗೆ 11:28, 31; 34:7; 36:31). ಮೋಶೆಯ ಕಾಲದ ನಂತರದಲ್ಲಿ ಕೆಲವೊಂದು ಸಂಪಾಕೀಯ ಸೇರ್ಪಡೆಗಳನ್ನು ಮಾಡಲಾಯಿತೆಂಬುದನ್ನು ಪುರಾವೆಗಳು ಸೂಚಿಸುತ್ತವೆ. ಹೇಗೂ, ಆ ಹೆಚ್ಚಿನ ಸೇರ್ಪಡಿಸುವಿಕೆಗಳು ಯಾವ ವಿಧದಲ್ಲಿಯೂ ಶಾಸ್ತ್ರಗಳ ಪ್ರೇರಣೆಯನ್ನಾಗಲಿ ಮತ್ತು ಅಧಿಕಾರಕ್ಕಾಗಲಿ ಅಥವಾ ಆದಿಕಾಂಡವನ್ನು ಕ್ರಿ.ಪೂ. ಐದನೆಯ ಮತ್ತು ಮೂರನೆಯ ಶತಮಾನಗಳ ಮಧ್ಯದಲ್ಲಿನ ಯಾವದೋ ಸಮಯದಲ್ಲಿ ಮೋಶೆಯು ಬರೆದಿರುತ್ತಾನೆಂದು ಸಂಪ್ರದಾಯಿಕವಾಗಿರುವ ಅಭಿಪ್ರಾಯಕ್ಕಾಗಲಿ ಗಂಡಾಂತರವನ್ನೊಡ್ಡುವದಿಲ್ಲ.[5]

ಈಗ ನಮಗಿರುವ ಆದಿಕಾಂಡದ ವಾಕ್ಯವು ನಿಖರವಾಗಿ ಹೇಗೆ ಉಂಟಾಯಿತೆಂಬ ವಿಷಯಕ್ಕೆ ಸಂಬಂಧ ಪಟ್ಟಂತೆ, ನಾವು ಖಚಿತತೆಯಿಂದ ಮಾತಾಡುವದಕ್ಕೆ ಸಾಧ್ಯವಿಲ್ಲ. ಹಾಗಿದ್ದರೂ, ಮೋಶೆಯು, ಅಥವಾ ಆತನ ನೇತೃತ್ವದಲ್ಲಿದ್ದ ಯಾರೋ ಒಬ್ಬರು (ಯೆಹೋಶುವನ ರೀತಿಯವರು), ಬಹುಶಃ ಪುಸ್ತಕದ ಕೆಲವೊಂದು ಭಾಗಗಳನ್ನು ರಚಿಸುವದಕ್ಕೆ ಮೂಲಗಳನ್ನು - ಮೌಖಿಕ ಅಥವಾ ಲಿಖಿತ - ಬಳಸಿರಬಹುದೆಂದು ಕಾಣಿಸುತ್ತದೆ.[6] ನಂತರದ ಒಂದು ಕಾಲದಲ್ಲಿ, ಒಬ್ಬ ಲೇಖಕ/ಸಂಪಾದಕ,[7] ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ತನ್ನ ಪ್ರಸ್ತುತ ವಾಚಕರಿಗೆ ಸಮಂಜಸಗೊಳಿಸುವ ದೃಷ್ಟಿಯಲ್ಲಿ ಕೆಲವೊಂದು ಹೆಸರುಗಳನ್ನು ಮತ್ತು ಸ್ಥಳಗಳನ್ನು ಆಧುನೀಕರಿಸಿದನೆಂದು ಸ್ಪಷ್ಟವಾಗಿರುತ್ತದೆ.

ಹೇಗೂ, ವಿಚಾರವಾದಿ ಬೈಬಲ್ ವಿಮರ್ಶಕರು ಈ ಸಂಭಾವ್ಯ ಸಂಪಾದಕೀಯ ಸೇರ್ಪಡೆಗಳನ್ನು, ದೈವಶಾಸ್ತ್ರೀಕ ಬೆಳವಣಿಗೆಯ ವಿಕಾಸಾತ್ಮಕ ವಿಚಾರಗಳ ಜೊತೆಯಲ್ಲಿ, ಮಾತ್ರವಲ್ಲದೆ ಶಾಸ್ತ್ರಗಳ ಪ್ರೇರಣೆ ಮತ್ತು ಅಧಿಕಾರದ ನಿರಕಾರಣೆಯನ್ನು ಸಹ ಬಳಸಿಕೊಂಡು ಮೋಶೆಯ ಕಾಲದ ಬಳಿಕ ನೂರಾರು ವರ್ಷಗಳ ನಂತರದಲ್ಲಿ ಆದಿಕಾಂಡಕ್ಕೆ (ಮತ್ತು ಮಿಕ್ಕ ಪಂಚಪುಸ್ತಕಗಳಿಗೆ) ಊಹನೆಯ ಮೂಲಗಳನ್ನು ಹುಟ್ಟು ಹಾಕಿರುತ್ತಾರೆ. ಈ "ಮೂಲ ವಿಮರ್ಶಕರು" ಎಂಬವರೊಳಗೆ ಅನೇಕರ ಪ್ರಕಾರವಾಗಿ, ಮೂಲಪಿತೃಗಳ ಮತ್ತು ಮೋಶೆಯ ಕಥೆಗಳು ಯಾವದೇ ನಿಜವಾದ ಐತಿಹಾಸಿಕ ವಾಸ್ತವಾಂಶಗಳ ತಳಹದಿಯಿಲ್ಲದಂತಹ ದಂತಕಥೆಗಳ ಮೇಲೆ ಕಟ್ಟಲ್ಪಟ್ಟಿರುತ್ತವೆ ಎಂದಾಗಿರುತ್ತದೆ.

"ಸಾಕ್ಷ್ಯಾಧಾರಿತ ಊಹೆ"ಯ ಕುರಿತು ಒಂದು ವಿವರವಾದ ವಿಶ್ಲೇಷಣೆಯನ್ನು ನೀಡುವದು ಈ ವ್ಯಾಖ್ಯಾನಗ್ರಂಥದ ವ್ಯಾಪ್ತಿಯನ್ನು ಮೀರಿದ್ದಾಗಿದೆ; ಆದರೆ, ಆದಿಕಾಂಡ ಪುಸ್ತಕದ ವಿವರಣೆಯಲ್ಲಿ ಕೆಲವೊಂದು ಮುಖ್ಯ ಅಂಶಗಳ ಬಳಿಗೆ ಬರುವಾಗ, ಈ ಊಹೆಯಲ್ಲಿರುವ ದುರ್ಬಲತೆಗಳನ್ನು ವ್ಯಾಖ್ಯೆಗಳು ತೋರಿಸಿ ಕೊಡಲಿವೆ. ಬೈಬಲಿನ ಪ್ರಥಮ ಪುಸ್ತಕದ ಐಕ್ಯತೆ

ಮತ್ತು ಸತ್ಯತೆಯನ್ನು ಉಪೇಕ್ಷೆ ಮಾಡುವದಕ್ಕಾಗಿ ವಿಮರ್ಶಕರು ಬಹಳಷ್ಟು ಸುದೀರ್ಘವಾಗಿ ವಾದಿಸುತ್ತಾರೆ. ಹೇಗೂ, ಆದಿಕಾಂಡವು - ಮತ್ತು ಪಂಚಪುಸ್ತಕದ ಬಹಳಷ್ಟು ಭಾಗವು - ಏಕೆ ನ್ಯಾಯಯುತವಾಗಿ ಮೋಶೆಯಿಂದ ಬರೆಯಲ್ಪಟ್ಟಿರುವದಕ್ಕೆ ಸಾಧ್ಯವಿಲ್ಲ ಎಂಬುದನ್ನು ಸಾಭಿತುಗೊಳಿಸಲು ಯಾವದೇ ಬಲವಾದ ಪುರಾವೆಯನ್ನು ಮುಂದಿಟ್ಟಿರುವದಿಲ್ಲ. ಅವರ ಊಹೆಯು ಪ್ರಾಥಮಿಕವಾಗಿ ಯಾವದೇ ವಸ್ತುನಿಷ್ಠ ದಾರಿಯಿಂದ ಪರಿಶೀಲನೆ ಮಾಡುವದಕ್ಕೆ ಸಾಧ್ಯವಿಲ್ಲದ ಸಂದೇಹಾತ್ಮಕ ಪೂರ್ವಕಲ್ಪನೆಗಳ ಮೇಲೆ ರಚಿತವಾಗಿರುತ್ತದೆ.

ಆದಿಕಾಂಡ ಪುಸ್ತಕವನ್ನು ಬರೆಯುವದಕ್ಕೆ ಲೇಖಕ ಮತ್ತು ಪವಿತ್ರಾತ್ಮನು ಬಳಸಿರುವ ದಾರಿಗಳು ಬೈಬಲಾಧಾರಿತ ನಂಬಿಕೆಗೆ ನಿರ್ಣಯಕವಾದವುಗಳಲ್ಲ ಎಂದು ನಂಬುವುದು ತಾರ್ಕಿಕವಾದದ್ದು, ಯಾಕೆಂದರೆ ಬೈಬಲ್ ನಮಗೆ ಈ ಮಾಹಿತಿಯನ್ನು ಕೊಡುವದಿಲ್ಲ. ಇನ್ನೊಂದು ಕಡೆಯಲ್ಲಿ, ನಾವು ಪ್ರಾಚೀನ ಐತಿಹಾಸಿಕ ದಸ್ತಾವೇಜುಗಳು, ಶಾಸನಗಳು, ಮತ್ತು ಇತರೆ ಉತ್ಖನನದ ಹಸ್ತಕೃತಿಗಳಿಂದ ಮೂಲಪಿತೃಗಳ ಜಗತ್ತಿನ ಬಗ್ಗೆ ಹೆಚ್ಚೆಚ್ಚಾಗಿ ಕಲಿತುಕೊಂಡ ಹಾಗೆ, ಬೈಬಲಿನ ಕಥೆಗಳು ಸತ್ಯವೆಂಬ ವಾಸ್ತವಾಂಶದ ಬಗ್ಗೆ ಹೆಚ್ಚು ಜಾಗೃತರಾಗುತ್ತೇವೆ. ಅವುಗಳು ಯೆಹೂದ್ಯ ಜನರ ಮಹಿಮೆಕರವುಳ್ಳ ಹಾಗೂ ವೀರತನದ ಇತಿಹಾಸವನ್ನು ಬರೆಯುವದಕ್ಕಾಗಿ ಹುಟ್ಟುಹಾಕಿರುವಂತಹ ಕೇವಲ ವೀರತನದ ಪುರುಷರು ಹಾಗೂ ಸ್ತ್ರೀಯರ ಕುರಿತಾದ ದಂತಕಥೆಗಳಾಗಿರುವದಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಆದಿಕಾಂಡದ (ಮತ್ತು ಪಂಚಪುಸ್ತಕದ) ನಿಜವಾದ ವೀರನು ದೇವರೇ, ಕೃಪೆಯಿಂದ ಪಾಪಿಗಳಾದ ಮಾನವ ಜೀವಿಗಳನ್ನು ಕರೆದು ಆಶೀರ್ವಾದ ಮಾಡಿದ, ಅವರ ದೋಷಗಳ ಹೊರತಾಗಿಯೂ ಅವರನ್ನು, ಮುಂದೊಂದು ದಿನ ಮಾನವರನ್ನು ಪಾಪದ ಬಿಡಿಸಿ ರಕ್ಷಿಸುವದಕ್ಕಾಗಿ ತನ್ನ ಮಗನವನ್ನು ಬರಮಾಡುವದಕ್ಕೆ ಬಳಸಿಕೊಳ್ಳಬಹುದಾದ ಒಂದು ಜನಾಂಗವಾಗಿ ಸೃಷ್ಟಿಸಲು ಬಳಸಿದ ಸೃಷ್ಟಿಕರ್ತನೇ ಆಗಿದ್ದಾನೆ.

ಆದಿಕಾಂಡ ಪುಸ್ತಕವು ಪ್ರಾಮಾಣಿಕರಾದ ಆದರೆ ದಾರಿತಪ್ಪಿಸಲ್ಪಟ್ಟಿರುವ ವ್ಯಕ್ತಿಗಳಿಂದ ಸೃಷ್ಟಿಸಲ್ಪಟ್ಟ ಒಂದು "ಭಕ್ತಿಯುಳ್ಳ ಚೇಷ್ಠೆ" ಆಗಿರುವದಿಲ್ಲ. ಬದಲಾಗಿ, ಅದು ಲೋಕದ "ಆದಿ," ಮಾನವರ ಸೃಷ್ಟಿಯು, ಮತ್ತು ಪಾಪದ ಉಗಮ ಹಾಗೂ ಅದರ ಪರಿಣಾಮಗಳಿಗೆ ಸಂಬಂಧಿಸಿದ ಪ್ರೇರಿತ ದೇವರ ವಾಕ್ಯವಾಗಿದೆ. ಪ್ರಾಥಮಿಕವಾಗಿ, ಇದು ಇಡೀ ಬೈಬಲಿನುದ್ದಕ್ಕೂ ಮುಂದುವರೆಯುವ ಮಾನವ ಇತಿಹಾಸದಲ್ಲಿ ದೈವಿಕ ವಿಮೋಚನೆಯ ಕಥೆಯನ್ನು ತಿಳಿಯಪಡಿಸುತ್ತದೆ. ಪ್ರಕಟನೆ ಪುಸ್ತಕವು ಯುಗಗಳಿಗೆ ಸೇರಿದ ವಿಮೋಚಿಸಲ್ಪಟ್ಟ ಜನರ ದೃಶ್ಯದೊಂದಿಗೆ ಕಥೆಯು ಸಮಾಪ್ತಿಗೊಳ್ಳುವದನ್ನು ಒಳಗೊಂಡಿರುತ್ತದೆ - ಏದೆನ್ ತೋಟದ ಪರದೈಸಿನಲ್ಲಿ ಅಲ್ಲ, ಆದರೆ ಪರಲೋಕದ ಪರದೈಸಿನಲ್ಲಿ ದೇವರ ಸಿಂಹಾಸನದ ಸುತ್ತಲು ಕೂಡಿ ಬಂದವರಾಗಿ, ಮೋಶೆಯ ಮತ್ತು ಕುರಿಯಾದಾತನ (ಯೇಸು) ಹಾಡನ್ನು ಹಾಡುತ್ತಾ ಮತ್ತು ತ್ರೈಯೇಕ ದೇವರು ಹಾಗೂ ಆತನ ಜನರೊಂದಿಗೆ ಎಂದೆಂದಿಗೂ ಅಂತಿಮವಾದ ಅನ್ಯೋನ್ಯತೆಯನ್ನು ಆನಂದಿಸುವವರಾಗಿ ಇರುತ್ತಾರೆ.

## ವಿಷಯಾನುಕ್ರಮಣಿಕೆ

### *ಟೋಲೆಡೊಥ* ವಿಭಜನೆಗಳು

ಆದಿಕಾಂಡವನ್ನು ಹತ್ತು ವಿಭಾಗಗಳಲ್ಲಿ ವಿಂಗಡಿಸಬಹುದು, ಪ್ರತಿಯೊಂದು ವಿಭಾಗವು ಇಬ್ರಿಯ ಭಾಷೆಯ תּוֹלְדוֹת (*ಟೋಲೆಡೊಥ*, ಅಥವಾ *ಥೋಲೆಡೊಥ)* ಎಂಬ ಪದದಿಂದ

ಆರಂಭಗೊಳ್ಳುತ್ತದೆ, ಅದರರ್ಥವು "ಕಥನ," "ವಂಶಗಳು," "ಸಂತತಿಗಳು," ಅಥವಾ "ಪೂರ್ವಜರ ನಿರೂಪಣೆ" ಎಂಬುದು (ನೋಡಿರಿ 2:4; 5:1; 6:9; 10:1; 11:10, 27; 25:12, 19; 36:1; 37:2). ಪ್ರತಿಯೊಂದು ಪ್ರಕರಣದಲ್ಲಿ, *ಟೋಲೆಡೊಥ* ಎಂಬುದನ್ನು ತಂದೆ ಅಥವಾ ವಿಭಾಗದಲ್ಲಿರುವ ಪ್ರಮುಖ ವ್ಯಕ್ತಿಯನ್ನು ಗುರುತಿಸುವ ಒಂದು ಪರಿಚಯಾತ್ಮಕ ಪದಗುಚ್ಛದ ಭಾಗವಾಗಿ ಬಳಸಲಾಗುತ್ತದೆ. ಇದಕ್ಕೆ ಹೊರತಾಗಿರುವ ಏಕೈಕ ಸಂಭಾವ್ಯ ವಾಕ್ಯಭಾಗವೆಂದರೆ 2:4, ಅದನ್ನು ಕೆಲವರು 2:5-25ರ ವಾಕ್ಯಭಾಗಕ್ಕೆ ಪರಿಚಯಾತ್ಮಕವಾದದ್ದು ಎಂಬುದಕ್ಕಿಂತಲೂ ಅದು 1:1-2:3ರ ವಾಕ್ಯಭಾಗಕ್ಕೆ ಒಂದು ಮುಕ್ತಾಯವಾಗಿರುತ್ತದೆಂದು ಅಭಿಪ್ರಾಯ ಪಡುತ್ತಾರೆ. ಕೆಲವೊಂದು ಸಂದರ್ಭಗಳಲ್ಲಿ, *ಟೋಲೆಡೊಥ* ಪದವು ಒಂದು ವಿಭಾಗದೊಳಗೆ ಪುನರಾವರ್ತಿಸಲ್ಪಟ್ಟಿರುತ್ತದೆ (10:1, 32; 25:12, 13; 36:1, 9).

ಆದಿಕಾಂಡದ ಹತ್ತು ವಿಭಾಗಗಳ ಆರಂಭದಲ್ಲಿ *ಟೋಲೆಡೊಥ* ಪದವು ಕಾಣಿಸಿಕೊಳ್ಳುವಾಗ, NASBಯು ಅದನ್ನು 2:4ರಲ್ಲಿ ಮಾತ್ರವೇ "ಕಥನ" ಎಂದು, ಮತ್ತು ಅದು ಕಾಣಿಸಿಕೊಳ್ಳುವ ಉಳಿದ ಕಡೆಗಳಲ್ಲೆಲ್ಲಾ "ವಂಶಗಳು" ಎಂದು ಅನುವಾದಿಸಿರುತ್ತದೆ. KJVಯು ಈ ಪದವನ್ನು ನಿರಂತರವಾಗಿ "ವಂಶಗಳು" ಎಂದು ಅನುವಾದಿಸುತ್ತದೆ; RSVಯು ಮೊದಲ ನಾಲ್ಕು ವಾಕ್ಯಭಾಗಗಳಲ್ಲಿ "ವಂಶದವರು" ಎಂದು, ಮುಂದಿನ ಐದು ಕಡೆಗಳಲ್ಲಿ "ಸಂತತಿಯವರು" ಎಂದು, ಹಾಗೂ ಕಡೆಯದ್ದರಲ್ಲಿ "ಚರಿತ್ರೆ" ಎಂಬದಾಗಿ ಅನುವಾದಿಸಿರುತ್ತದೆ. ಇವುಗಳೊಳಗೆ ಐದು ವಿಭಾಗಗಳೊಳಗೆ, *ಟಪಲೆಡೊಥ* ನಂತರದಲ್ಲಿ ಒಂದು ಕಥನ (ಕಥೆ) ಬರುತ್ತದೆ, ಇನ್ನುಳಿದ ಐದರೊಳಗೆ ಅದು ಒಂದು ವಂಶಾವಳಿಯನ್ನು ತಿಳಿಸುವದಕ್ಕೆ ಸಾಗುವಂತೆ ಕಾಣಿಸುತ್ತದೆ. ಈ ಹತ್ತು *ಟೋಲೆಡೊಥ* ವಿಭಾಗಗಳನ್ನಾಧರಿಸಿದ ಒಂದು ಸಂಕ್ಷಿಪ್ತ ವಿವರಣೆಯು ಈ ಕೆಳಗಿನಂತಿರುತ್ತದೆ:

ಪರಿಚಯ: ಆಕಾಶ ಮತ್ತು ಭೂಮಿಯ ಸೃಷ್ಟಿ (1:1-2:3).

*ಪ್ರಳಯಪೂರ್ವದ ಕುಟುಂಬಗಳ ಕಥನ*

1. ಆಕಾಶ ಮತ್ತು ಭೂಮಿಯ ಕಥಾನಿರೂಪಣೆ ("ಕಥನ") (2:4-4:26)
2. ಆದಾಮನ ವಂಶಾವಳಿ (5:1-6:8)
3. ನೋಹನ ಪೂರ್ವಜರ ಕಥಾನಿರೂಪಣೆ (6:9-9:29)
4. ನೋಹನ ಪುತ್ರರ ವಂಶಾವಳಿ (10:1-11:9)
5. ಶೇಮನ ವಂಶಾವಳಿ (11:10-26**)**

*ಅಬ್ರಹಾಮನ ಕುಟುಂಬದ ಕಥನ*

6. ತೆರಹನ ಪೂರ್ವಜರ ಕಥಾನಿರೂಪಣೆ (11:27-25:11)
7. ಇಸ್ಮಾಯೇಲನ ವಂಶಾವಳಿ (25:12-18)
8. ಇಸಾಕನ ಪೂರ್ವಜರ ಕಥಾನಿರೂಪಣೆ (25:19-35:29)
9. ಏಸಾವನ ವಂಶಾವಳಿ (36:1-43)
10. ಯಾಕೋಬನ ಪೂರ್ವಜರ ಕಥಾನಿರೂಪಣೆ (37:1-50:26)

## ರಚನಾವಿನ್ಯಾಸ

ರಚನಾವಿನ್ಯಾಸಾತ್ಮಕವಾಗಿ, ಪುಸ್ತಕವು ಎರಡು ಪ್ರಮುಖ ವಿಭಜನೆಗಳನ್ನೊಳಗೊಂಡಿದೆ: (1) 1ರಿಂದ 11 ಅಧ್ಯಾಯಗಳು ಮತ್ತು (2) 12ರಿಂದ 50 ಅಧ್ಯಾಯಗಳು. ಮೊದಲ ಭಾಗವು ಸೃಷ್ಟಿ ಮೊದಲ್ಗೊಂಡು ಪ್ರಳಯದ ವರೆಗಿನ ವಿಷಯಗಳನ್ನೊಳಗೊಂಡಿದೆ ಮತ್ತು ಎರಡನೆಯ ಭಾಗವು ದೇವರ ಜನರ ಬೆಳವಣಿಗೆ, ಆತನು ಅಬ್ರಹಾಮನಿಗೆ ಮಾಡಿದ ವಾಗ್ದಾನಗಳ ನೆರವೇರುವಿಕೆ ಇವುಗಳ ಕುರಿತು ತಿಳಿಸುತ್ತದೆ.

*1-11 ಅಧ್ಯಾಯಗಳು.* ಈ ಮೊದಲನೆಯ ಭಾಗವು ಅದರ ವ್ಯಾಪ್ತಿಯಲ್ಲಿ ಸಾರ್ವತ್ರಿಕವಾಗಿರುತ್ತದೆ ಮತ್ತು ಆದಿಯುಗದ ಇತಿಹಾಸವನ್ನು, ಅಂದರೆ ಆಕಾಶ ಮತ್ತು ಸಕಲ ಆಕಾಶಕಾಯಗಳ ಸೃಷ್ಟಿ, ಸಮುದ್ರ ಮತ್ತು ಭೂಮಿಯ ಮೇಲೆ ಸಕಲ ವಿಧವಾದ ಜೀವಿಗಳನ್ನೊಳಗೊಂಡ ಭೂಮಿಯ ಸೃಷ್ಟಿ, ಮತ್ತು ಮೇಲಿನ ದಿಗಂತದಲ್ಲಿ ಹಾರಾಡುವ ಜೀವಿಗಳ ಸೃಷ್ಟಿಯನ್ನು ಕುರಿತ ಸಂಗತಿಗಳನ್ನು ಒಳಗೊಂಡಿರುತ್ತದೆ. ಕಥಾನಿರೂಪಣೆಯು ಶೀಘ್ರದಲ್ಲಿ ಮಾನವರ - ದೇವರ ಸೃಷ್ಟಿಯ ಸರ್ವೋಚ್ಚತೆ, ಆತನ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟವರು ಆಗಿರುವ ಪುರುಷ ಮತ್ತು ಸ್ತ್ರೀ ಜೀವಿಗಳು - ಸೃಷ್ಟಿಯ ಕಡೆಗೆ ಸಾಗುತ್ತದೆ. ಕರ್ತನು ಅವರ ಪ್ರತಿಯೊಂದು ಅಗತ್ಯತೆಗಳನ್ನು ಒದಗಿಸಿ ಕೊಟ್ಟನು, ಅವರನ್ನು ಪರಿಪೂರ್ಣವಾದ ಪರಿಸರದಲ್ಲಿರಿಸಿದನು ಮತ್ತು ಅವರಿಗೆ ತಮ್ಮ ಜೀವಿತಗಳ ದಿಕ್ಕನ್ನು ಆರಿಸಿಕೊಳ್ಳುವಂತೆ ಸ್ವತಂತ್ರ ಚಿತ್ತ ಮತ್ತು ಶಕ್ತಿಯನ್ನು ಅನುಗ್ರಹಿಸಿದನು (1:1–2:25).

ಸೃಷ್ಟಿಯ ನಂತರದಲ್ಲಿ ಆದಾಮ ಮತ್ತು ಹವ್ವಳ ಮೂಲಕವಾಗಿ ಪಾಪದ ಆರಂಭವು ಸಂಭವಿಸಿತು, ಅದು ಕಾಯಿನನು ತನ್ನ ತಮ್ಮನಾದ ಹೇಬೆಲನನ್ನು ಕೊಲೆ ಮಾಡುವದರ ಮೂಲಕವಾಗಿ ಇಡೀ ಮಾನವ ಜನಾಂಗಕ್ಕೆ ಹಬ್ಬಿಕೊಂಡಿತು. ಇದು ಮನುಷ್ಯನು ವ್ಯತಿರಿಕ್ತವಾದ ವಾತಾವರಣದ ವಿರುದ್ಧ ಹೋರಾಟವನ್ನು ಅನುಭವಿಸುವಂತೆ ಮತ್ತು ಸನ್ನಿಹಿತವಾದ ಮರಣವನ್ನು ಅನುಭವಿಸುವಂತೆ ಮಾಡಿತ್ತು (3:1–5:32). ಪಾಪದಲ್ಲಿ ಮಾನವನು ಕೆಳಮುಖವಾಗಿ ಕುಸಿಯುವದು ಭೂಮಿಯನ್ನೆಲ್ಲಾ ಅದು ಒಂದು ಪೀಡುಗಿನಂತೆ ವ್ಯಾಪಿಸಿಕೊಳ್ಳುವ ವರೆಗೂ, ಅದನ್ನು ಹಿಂಸೆ ಹಾಗೂ ನಾಶನದಿಂದ ತುಂಬಿಸುವ ತನಕವೂ ಮುಂದುವರೆಯಿತು; ಆದರೆ ದೇವರ ಕೃಪೆಯಿಂದಾಗಿ, ಒಬ್ಬ ಮನುಷ್ಯ ಮತ್ತು ಆತನ ಕುಟುಂಬವು ಮನುಷ್ಯನ ಕೆಟ್ಟತನವನ್ನು ದಂಡಿಸುವದಕ್ಕೋಸ್ಕರ ದೇವರು ಕಳುಹಿಸಿದ ಪ್ರಳಯದಿಂದ ತಪ್ಪಿಸಿ ಕಾಪಾಡಲ್ಪಟ್ಟರು (6:1–9:29). ತರುವಾಯ, ಮನುಷ್ಯರೆಲ್ಲಾ ಬಾಬೆಲ ಗೋಪುರವನ್ನು ಕಟ್ಟುವ ಮೂಲಕ ತಮಗೋಸ್ಕರ ಹೆಸರನ್ನು ಮಾಡಿಕೊಳ್ಳಬೇಕೆಂದು ಒಗ್ಗೂಡಿ ಬಂದರು, ಆ ಗೋಪುರದ ತುದಿಯು ಆಕಾಶವನ್ನು ಮುಟ್ಟುವದಾಗಿರಬೇಕೆಂದು ಅವರ ಗುರಿಯಾಗಿತ್ತು; ಆದರೆ ಅವರ ಪ್ರಯತ್ನಗಳನ್ನೆಲ್ಲಾ ನಿಷ್ಫಲಗೊಳಿಸಿದನು, ಅವರ ಭಾಷೆಗಳನ್ನು ಗಲಿಬಿಲಿಗೊಳಿಸಿದನು, ಮತ್ತು ಅವರನ್ನು ಭೂಮಿಯ ಮೇಲೆಲ್ಲಾ ಚದುರಿಸಿ ಬಿಟ್ಟನು (10:1–11:32).

*12-50 ಅಧ್ಯಾಯಗಳು.* ಸಾರ್ವತ್ರಿಕ ಪಾಪ ಮತ್ತು ದಂಡನೆಯ ಕಥೆಯ ಬಳಿಕ, ಆದಿಕಾಂಡದ ಎರಡನೆಯ ಪ್ರಮುಖ ವಿಭಾಗವು ಮುಖ್ಯಗಮನವನ್ನು ಸಂಕುಚಿತಗೊಳಿಸಿಕೊಳ್ಳುತ್ತದೆ. ಈ ಸನ್ನಿವೇಶದಲ್ಲಿ, ಕರ್ತನು ಮಾನವರ ಅವಿಧೇಯತೆಯ ಕಾರಣದಿಂದಾಗಿ ಅವರ ಮೇಲೆ ಘೋಷಿಸಿದ್ದ ಶಾಪಗಳನ್ನು ಜಯಿಸುವಂತಹ ವಾಗ್ದಾನಗಳನ್ನು ಪ್ರಕಟಗೊಳಿಸುತ್ತಾನೆ. ಈ ಅಧ್ಯಾಯಗಳು ಪುಸ್ತಕದ ಮುಖ್ಯ ತಿರುಳನ್ನೊಳಗೊಂಡಿವೆ, ಅದು ದೇವರ ಜನರ, ಅಂದರೆ ಅಬ್ರಾಮ/ಅಬ್ರಹಾಮ[8] ಮತ್ತು ಆತನ ಸಂತತಿಯವರಿಂದ ಕೂಡಿದ

ಪೂರ್ವಜರ ಇತಿಹಾಸದ ಆರಂಭವನ್ನು ಒಳಗೊಂಡಿದೆ.

1. ಈ ವಿಭಾಗವು ದೇವರು ಅಬ್ರಹಾಮನನ್ನು ಆತನ ಸ್ವಂತ ಊರಾದ ಊರ್ (ದಕ್ಷಿಣದ ಮೆಸಪೋತಾಮ್ಯ) ಎಂಬ ಸ್ಥಳವನ್ನು ತೊರೆದು ಕಾನಾನ್ ದೇಶಕ್ಕೆ ಹೊರಡುವಂತೆ ನೀಡುವ ಕರೆಯೊಂದಿಗೆ ಆರಂಭವಾಗುತ್ತದೆ, ಆತನು ಆ ದೇಶದಲ್ಲಿ ಹಲವಾರು ಆಶೀರ್ವಾದಗಳನ್ನು ಪಡೆದುಕೊಳ್ಳಲಿದ್ದನು. ಅವುಗಳೊಳಗೆ ಭೂಮಿ, ಒಂದು ದೊಡ್ಡ ಪ್ರಸಿದ್ಧಿ ಮತ್ತು ಜನಾಂಗ (ಆ ಸಂದರ್ಭದಲ್ಲಿ ಆತನಿಗೆ ಮಕ್ಕಳಿಲ್ಲದಿದ್ದಾಗ್ಯೂ) ಇವುಗಳು, ಮತ್ತು ಆತನ ಮುಖಾಂತರವಾಗಿ ಭೂಲೋಕದ ಕುಟುಂಬಗಳೆಲ್ಲಾ ಆಶೀರ್ವದಿಸಲ್ಪಡುವವು ಎಂಬ ಸತ್ಯವು ಸೇರಿತ್ತು. ಅಬ್ರಹಾಮನು ತನ್ನ ನಂಬಿಕೆಯೊಂದಿಗೆ ಹೋರಾಟವನ್ನು ಅನುಭವಿಸಿದನು, ಅನೇಕ ವರ್ಷಗಳ ಕಾಲ ದುರ್ಬಲವಾದ ಆದರೆ ದೇವರಲ್ಲಿ ವಿಶ್ವಾಸವನ್ನು ಹೆಚ್ಚೆಚ್ಚು ಬೆಳಸಿಕೊಳ್ಳುವವನಾಗಿ ಜೀವಿಸಿದನು. ಒಂದು ಸಾಕಷ್ಟು ಪ್ರಮಾಣದ ಕಾಲವು ಗತಿಸಿದ ಮೇಲೆ, ಆತನು ಬಲವಾದ ನಂಬಿಕೆಯೊಂದನ್ನು ಬೆಳೆಸಿಕೊಂಡನು ಮತ್ತು ಇಸಾಕನು - ವಾಗ್ದಾನ ಮಾಡಲ್ಪಟ್ಟ ಮಗನು - ಜನಿಸಿದನು (ಅಧ್ಯಾಯ 21; ನೋಡಿರಿ 12-23 ಅಧ್ಯಾಯಗಳು).

2. ಇಸಾಕನು ಮುಖ್ಯವಾಗಿ ಅಬ್ರಹಾಮ ಮತ್ತು ಯಾಕೋಬರ ನಡುವೆ ಬಂದು ಹೋಗುವ ಪರಿವರ್ತನೆ ವ್ಯಕ್ತಿಯಾಗಿದ್ದನು. ಆತನ ಜೀವನದ ಕಥನವು ಆಶ್ಚರ್ಯಕರವಾದ ರೀತಿಯಲ್ಲಿ ಕ್ಲುಪ್ತವಾಗಿರುತ್ತದೆ. ಅಬ್ರಹಾಮನು ಹಾರಾನಿಗೆ (ಆತನ ಕುಟುಂಬದವರಲ್ಲಿ ಕೆಲವರು ಇನ್ನೂ ವಾಸಿಸುತ್ತಿದ್ದ ಸ್ಥಳ) ತನ್ನ ನಂಬಿಗಸ್ತನಾದ ಸೇವಕನನ್ನು ಕಳುಹಿಸುವ ಮೂಲಕವಾಗಿ, ಇಸಾಕನಿಗೆ “ರೆಬೆಕ್ಕಾ” ಎಂಬ ಹೆಸರಿನ ಹೆಂಡತಿಯು ಸಿಕ್ಕಿದಳು. ಆಕೆಯು ಅನೇಕ ವರ್ಷಗಳ ವರೆಗೂ ಬಂಜೆಯಾಗಿದ್ದಳು; ಆದರೆ ಇಸಾಕನು ಆಕೆಗೋಸ್ಕರ ಪ್ರಾರ್ಥನೆ ಮಾಡಿದಾಗ, ಕರ್ತನು ಆಕೆಗೆ ಅವಳಿ ಪುತ್ರರನ್ನು ನೀಡಿ ಆಶೀರ್ವದಿಸಿದನು: ಏಸಾವ ಮತ್ತು ಯಾಕೋಬ. ಅದರ ಜೊತೆಗೆ, ದೇವರು ಇಸಾಕನ ಸಂಗಡ ಒಡಂಬಡಿಕೆಯ ವಾಗ್ದಾನವನ್ನು ನವೀಕರಿಸಿಕೊಂಡನು; ಆದರೆ ದೇವರು ಈ ವಾಗ್ದಾನಗಳನ್ನು ನೆರವೇರಿಸುವದಕ್ಕೆ ಹೊಂದಿರುವ ಯೋಜನೆಯು ಇಸಾಕನಿಗಿದ್ದ ಬಯಕೆಗಳಿಗೆ ವಿರುದ್ಧವಾಗಿತ್ತು. ವಂಶಾವಳಿಯ ಆಶೀರ್ವಾದಗಳು ಆತನಿಗೆ ನೆಚ್ಚಿನ ಮಗನಾಗಿದ್ದ ಏಸಾವನ ಮುಖಾಂತರವಾಗಿ ಅಲ್ಲ, ಆದರೆ ಕಿರಿಯ ಮಗನಾದ ಯಾಕೋಬನ ಮುಖಾಂತರ ಮುಂದುವರೆಯಲಿತ್ತು (24:1-25:26).

3. ಯಾಕೋಬನ ಕಥೆಗಳು ತನ್ನ ಜೀವಿತ ಕಾಲವೆಲ್ಲಾ ಸತ್ಯವಂತಿಕೆಯ ವಿಷಯದಲ್ಲಿ ಬಹಳಷ್ಟು ಹೋರಾಟವನ್ನು ಅನುಭವಿಸಬೇಕಾಗಿದ್ದ ಒಬ್ಬ ಮನುಷ್ಯನ ಕುರಿತು ಬಯಲುಗೊಳಿಸುತ್ತವೆ. ಆತನು ಸಂಚು ಮಾಡುವಿಕೆ ಮತ್ತು ವಂಚನೆ ಮಾಡುವಿಕೆಯನ್ನು ತನ್ನ ಜೀವನದ ಶೈಲಿಯನ್ನಾಗಿ ಮಾಡಿಕೊಳ್ಳುವಂತೆ ಕಂಡನು. ಆತನ ಆರಂಭಿಕ ವರ್ಷಗಳಲ್ಲಿ, ಯಾಕೋಬನು ಹಸಿವೆಯಿಂದಿದ್ದ ಏಸಾನವ ಸ್ಥಿತಿಯನ್ನು ಲಾಭಕ್ಕೆ ಬಳಸಿಕೊಂಡನು, ಆತನ ಚೊಚ್ಚಲುತನದ ಹಕ್ಕನ್ನು ಮಾರುವಂತೆ ಒಡಂಬಡಿಸಿದನು. ಆತನ ತಂದೆಯು ವೃದ್ಧನು ಮತ್ತು ಕಣ್ಣು ಕಾಣದವನು ಆಗಿದ್ದ ವೇಳೆ, ಯಾಕೋಬನು (ತನ್ನ ತಾಯಿಯಾದ ರೆಬೆಕ್ಕಳ ಜೊತೆ ಸೇರಿಕೊಂಡು) ಮರಣ ಹಾಸಿಗೆಯಲ್ಲಿದ್ದ ಇಸಾಕನು ಆಶೀರ್ವಾದವನ್ನು, ಏಸಾವನಿಗೆ ಬದಲಾಗಿ ತನಗೆ ಕೊಡುವಂತೆ ವಂಚಿಸಿದನು. ಆ ಬಳಿಕ, ತನ್ನ ಅಣ್ಣನ ಕೋಪದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ, ಇಸಾಕನು ಮೆಸಪೋತಾಮ್ಯದ ಒಳನಾಡಿನಲ್ಲಿದ್ದ ಹಾರಾನಿಗೆ ಪಲಾಯನ ಮಾಡಿದನು. ಆ ದೂರದ ದೇಶದಲ್ಲಿ, ಆತನು ತನಗೆ ಸರಿಸಾಟಿಯಾದವನನ್ನು ಭೇಟಿಯಾದನು ಯಾಕೆಂದರೆ ಆತನ ಮಾವನಾದ ಲಾಬಾನನು ಸಹ ಒಬ್ಬ ನಿಪುಣ ಸುಳ್ಳುಗಾರ ಮತ್ತು ಮೋಸಗಾರನಾಗಿದ್ದನು. ಆತನು ತನ್ನ ಪುತ್ರಿಯರಾದ ರಾಹೇಲಳನ್ನು ಮತ್ತು ಲೇಯಾಳನ್ನು

ಮದುವೆಯಾಗುವ ಹಕ್ಕನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಹದಿನಾಲ್ಕು ವರ್ಷಗಳ ಕಾಲ ಕೆಲಸ ಮಾಡುವಂತೆ ಯಾಕೋಬನನ್ನು ಮೋಸಗೊಳಿಸಿ ನಂಬಿಸಿದನು. ಲಾಬಾನನು ಯಾಕೋಬನಿಗೆ ಇನ್ನೂ ಆರು ವರ್ಷಗಳ ಕಾಲ ದುಡಿದರೆ ಸಂಬಳವಾಗಿ ಸಾಕಷ್ಟು ಪಶುಗಳನ್ನು ಕೊಡುವೆನೆಂದು ವಾಗ್ದಾನ ಮಾಡಿದ ವೇಳೆ ಸುಳ್ಳಾಡಿದನು. ಹೇಗೂ, ಕರ್ತನು ಯಾಕೋಬನ ಸಂಗಡವಿದ್ದನು, ಆತನಿಗೆ ಬೃಹತ್ ಪ್ರಮಾಣದ ಮಂದೆಗಳನ್ನು ಮತ್ತು ಹಿಂಡುಗಳನ್ನು ನೀಡಿ ಆಶೀರ್ವದಿಸಿದನು. ಆತನ ಹೆಂಡತಿಯರ ಜೊತೆಯಲ್ಲಿ, ಯಾಕೋಬನು ಅವರ ಇಬ್ಬರು ದಾಸಿಯರನ್ನು ಉಪಪತ್ನಿಯರನ್ನಾಗಿ ಪಡೆದುಕೊಂಡನು. ಒಟ್ಟಾಗಿ, ಈ ನಾಲ್ವರು ಮಹಿಳೆಯರು ಯಾಕೋಬನಿಗಾಗಿ ಹದಿಮೂರು ಮಕ್ಕಳನ್ನು ಹಡೆದರು (ಹನ್ನೆರಡು ಪುತ್ರರು ಮತ್ತು ಒಬ್ಬಳು ಮಗಳು). ಅಲ್ಲದೆ ಕರ್ತನು ಆತನ ಮುಖಾಂತರವಾಗಿ ಒಡಂಬಡಿಕೆಯ ವಾಗ್ದಾನಗಳನ್ನು ದೃಢೀಕರಿಸಿದನು ಮತ್ತು ಕ್ರಮೇಣದಲ್ಲಿ ಏಸಾವನೊಂದಿದೆ ಸಮಾಧಾನ ಮಾಡಿಕೊಳ್ಳುವಂತೆ ಆತನನ್ನು ಪುನಃ ಕಾನಾನಿಗೆ ಬರಮಾಡಿದನು (25:27–35:15).

4. ರಾಹೇಲಳು ಯಾಕೋಬನ ನೆಚ್ಚಿನ ಮಗನಾದ ಯೋಸೇಫನಿಗೆ ಜನ್ಮವನ್ನು ನೀಡಿದ ಬಳಿಕ, ಆಕೆಯು ಅತಿ ಕಿರಿಯ ಮಗನಾದ ಬೆನ್ಯಾಮೀನನಿಗೆ ಜನ್ಮ ಕೊಡುವ ವೇಳೆ ಮರಣ ಹೊಂದಿದಳು. ಯೋಸೇಫನು ತನ್ನ ತಂದೆಯಿಂದ ಮುದ್ದು ಮಾಡಲ್ಪಟ್ಟವನಾಗಿ ಬೆಳೆದನು, ಮತ್ತು ಇದರಿಂದ ಆತನ ಅಣ್ಣಂದಿರು ಈತನ ಮೇಲೆ ಬಹಳವಾಗಿ ಹೊಟ್ಟೇಕಿಚ್ಚು ಪಡುವವರಾದರು. ಉದಾಹರಣೆಗೆ, ಯೋಸೇಫನು ಅವರ ಕುರಿತಾಗಿ ಕೆಟ್ಟ ವರದಿಯನ್ನು ತನ್ನ ತಂದೆಗೆ ತಂದು ತಿಳಿಸುತ್ತಿದ್ದನು. ಇಡೀ ಕುಟುಂಬದವರು ಮುಂದೊಂದು ದಿನ ತನ್ನ ಮುಂದೆ ಅಡ್ಡ ಬೀಳುವರೆಂಬುದಕ್ಕೆ ಕನಸುಗಳನ್ನು ಸಂಬಂಧಗೊಳಿಸಿ ಅವರೆಲ್ಲರಿಗೆ ಕೋಪ ಉಂಟು ಮಾಡಿದ್ದನು. ಆತನು ಹದಿನೇಳು ವಯಸ್ಸಿನವನಾಗಿದ್ದ ವೇಳೆ, ಯೋಸೇಫನ ಅಣ್ಣಂದಿರು ಆತನನ್ನು ಐಗುಪ್ತದ ಕಡೆಗೆ ಸಾಗುತ್ತಿದ್ದ ಪ್ರಯಾಣಿಕರಿಗೆ ಮಾರಾಟ ಮಾಡಿದರು; ಒಂದು ಕಾಡು ಮೃಗವು ಆತನನ್ನು ಕೊಂದಿತೆಂಬ ಅನಿಸಿಕೆಯನ್ನು ತಮ್ಮ ತಂದೆಗೆ ಬರುವಂತೆ ಮಾಡಿದ್ದರು (35:16–37:35).

5. ಐಗುಪ್ತದಲ್ಲಿ ಯೋಸೇಫನು ಮೊದಲಯ ಪೋಟೀಫರನಿಗೆ ಒಬ್ಬ ದಾಸನಾಗಿ ಸೇವೆ ಮಾಡಿದನು, ಆತನು ಫರೋಹನ ಅಂಗರಕ್ಷಕರಿಗೆ ದಳವಾಯಿಯಾಗಿದ್ದನು. ಪೋಟೀಫರನ ಹೆಂಡತಿಯು ಆತನ ಮೇಲೆ ಅವನು ಸಂಭೋಗಕ್ಕೆ ಕರೆಯಲು ಪ್ರಯತ್ನಿಸಿದನೆಂಬ ಸುಳ್ಳು ಆರೋಪವನ್ನು ಹೊರಿಸಿದಾಗ, ಆತನು ಸೆರೆಮನೆಗೆ ಹಾಕಲ್ಪಟ್ಟನು. ಹೇಗೂ, ಯೋಸೇಫನ ಕಷ್ಟಗಳಲ್ಲೆಲ್ಲಾ ದೇವರು ಆತನ ಸಂಗಡವಿದ್ದನು, ಸೆರೆಮನೆಯಲ್ಲಿದ್ದು ಬೇರೆ ಇಬ್ಬರು ಕೈದಿಗಳು ಕಂಡ ಕನಸುಗಳ ಅರ್ಥವನ್ನು ಹೇಳುವಂತೆ ಈತನನ್ನು ಶಕ್ತಗೊಳಿಸಿದನು. ಅಂತಿಮವಾಗಿ, ಸ್ವತಃ ಫರೋಹನು ಕಂಡಿದ್ದ ಏಳು ವರ್ಷಗಳ ಸುಭಿಕ್ಷದ ಬಳಿಕ ಏಳು ವರ್ಷಗಳ ದುರ್ಭಿಕ್ಷ ಕಾಲವು ಬರಲಿದೆ ಎಂಬುದರ ಕುರಿತಾದ ಕನಸುಗಳ ಅರ್ಥವನ್ನು ಹೇಳಿದನು. ಯೋಸೇಫನ ದೇವರು ಇದನ್ನು ಆತನಿಗೆ ಪ್ರಕಟಗೊಳಿಸಿದನೆಂಬುದನ್ನು ಫರೋಹನು ಅರಿತುಕೊಂಡಾಗ, ಆತನು ಯೋಸೇಫನನ್ನು ಐಗುಪ್ತದಲ್ಲಿ ಎರಡನೆಯ ದೊರೆಯನ್ನಾಗಿ ಮಾಡಿದನು, ಮುಂದೆ ಬರಲಿದ್ದ ಕ್ಷಾಮದ ವರ್ಷಗಳಿಗೋಸ್ಕರ ಸಿದ್ಧತೆಯನ್ನು ಮಾಡುವದಕ್ಕೆ ಸಂಪೂರ್ಣ ಅಧಿಕಾರವನ್ನು ಕೊಟ್ಟನು.

ಸರಿಯಾದ ಸಮಯಕ್ಕೆ, ಬರಗಾಲ ಮತ್ತು ಕ್ಷಾಮಗಳು ದಕ್ಷಿಣದ ಮೆಡಿಟೆರ್ರೇನಿಯನ್ ಜಗತ್ತಿನ ಮೇಲೆ ಸಂಭವಿಸಿದ್ದವು, ಮತ್ತು ಯಾಕೋಬನು ಧಾನ್ಯಗಳನ್ನು ಖರೀದಿಸುವದಕ್ಕಾಗಿ ತನ್ನ ಮಕ್ಕಳನ್ನು ಐಗುಪ್ತಕ್ಕೆ ಕಳುಹಿಸಿ ಕೊಟ್ಟನು. ಯೋಸೇಫನು ಅವರ ಗುರುತು

ಹಿಡಿಯುತ್ತಾನೆ, ಆದರೆ ಅವರು ಆತನ ಗುರುತನ್ನು ಹಿಡಿಯಲಿಲ್ಲ; ಆದ್ದರಿಂದ ಆತನು ಅವರನ್ನು ಪರೀಕ್ಷಿಸಲಾರಂಭಿಸುತ್ತಾನೆ. ಮೊದಲು, ಅವರು ಗೂಢಾಚಾರರು ಎಂಬ ಆರೋಪವನ್ನು ಅವರ ಮೇಲೆ ಹೊರಿಸಿದನು, ಮತ್ತು ಬಳಿಕ ಅವರನ್ನು ಸೆರೆಮನೆಗೆ ಹಾಕಿಸಿದನು. ಆತನು ಆತನ ಅಣ್ಣಂದಿರೊಳಗೆ ಬಹುಮಂದಿಯನ್ನು ಆಹಾರ ಸಾಮಗ್ರಿಗಳೊಂದಿಗೆ ಹಿಂದಿರುಗಿ ಹೋಗುವಂತೆ ಅನುಮತಿಸಿದನು, ಅವರು ಬೆನ್ಯಾಮೀನನನ್ನು ಕರೆದುಕೊಂಡು ಬರುವ ತನಕ ಸಿಮೆಯೋನನನ್ನು ಮಾತ್ರವೇ ಸೆರೆಯಲ್ಲಿಟ್ಟುಕೊಂಡನು. ಅವರ ಧಾನ್ಯವು ತೀರಿ ಹೋದ ವೇಳೆ, ಯಾಕೋಬನು ಅಣ್ಣಂದಿರು ಬೆನ್ಯಾಮೀನನ್ನು ಕರೆದುಕೊಂಡು ಇನ್ನಷ್ಟು ಸಾಮಗ್ರಿಗಳನ್ನು ತೆಗೆದುಕೊಂಡು ಬರುವಂತೆ ಹೋಗುವದಕ್ಕೆ ಅನುಮತಿಸಿದನು. ಅಂತಿಮವಾಗಿ, ಯೋಸೇಫನಿಗೆ ತನ್ನ ಅಣ್ಣಂದಿರು ಬದಲಾಗಿದ್ದರೆ ಮತ್ತು ತಾವು ಆತನಿಗೆ ವರ್ಷಗಳ ಹಿಂದೆ ಮಾಡಿದ್ದ ಕೃತ್ಯದ ನಿಮಿತ್ತ ವಿಷಾದ ಹೊಂದಿದ್ದಾರೆಂಬ ಮನವರಿಕೆಗೊಂಡನು. ಆದದರಿಂದ, ಆತನು ಅವರಿಗೆ ತಾನು ಯಾರೆಂಬುದನ್ನು ತಿಳಿಯಪಡಿಸಿದನು ಮತ್ತು ತನ್ನ ಸಮೀಪದಲ್ಲಿ ಗೋಷೆನ್ ಸೀಮೆಯಲ್ಲಿ ವಾಸಿಸುವಂತೆ ಅವರ ತಂದೆಯನ್ನು ಹಾಗೂ ಉಳಿದ ಕುಟುಂಬವನ್ನೆಲ್ಲಾ ಕರೆದುಕೊಂಡು ಬರುವಂತೆ ಅವರನ್ನು ಪುನಃ ಕಾನಾನಿಗೆ ಕಳುಹಿಸಿದನು.

ಆದಿಕಾಂಡವು ತಮ್ಮ ತಂದೆಯ ಮರಣದ ಬಳಿಕ ಯೋಸೇಫನು ತನ್ನ ಸಹೋದರರಿಗೆ ಪುನರಾಶ್ವಾಸನೆಯನ್ನು ಕೊಡುವದರೊಂದಿಗೆ ಅಂತ್ಯಗೊಳ್ಳುತ್ತದೆ. ತಾನು ಅವರಿಗೆ ಯಾವ ಕೇಡನ್ನು ಮಾಡುವದಿಲ್ಲ ಎಂದು ವಾಗ್ದಾನ ಮಾಡುತ್ತಾ, "ಅನೇಕ ಪ್ರಾಣಿಗಳಿಗೆ ಸಂರಕ್ಷಣೆಯುಂಟಾಗುವಂತೆ" ಕರ್ತನು ಅನುಗ್ರಹದ ಹಸ್ತವು ಈ ಎಲ್ಲಾ ಘಟನೆಗಳಲ್ಲಿ ಕೆಲಸ ಮಾಡುತ್ತಿತ್ತೆಂದು ಒತ್ತಿ ಹೇಳಿದನು (50:20) ಆತನ ಮರಣದ ಮುಂಚೆ, ದೇವರು ಅಬ್ರಹಾಮ, ಇಸಾಕ, ಮತ್ತು ಯಾಕೋಬರಿಗೆ ಮಾಡಿದ ತನ್ನ ಒಡಂಬಡಿಕೆಯಲ್ಲಿ ನಂಬಿಗಸ್ತನಾಗಿರುವನು ಎಂದು ತನ್ನ ಸಹೋದರರಿಗೆ ಜ್ಞಾಪಕಗೊಳಿಸಿದನು. ಆತನು ನಿಶ್ಚಯವಾಗಿಯೂ ಅವರನ್ನು ಆರೈಕೆ ಮಾಡುವನು ಮತ್ತು ಒಂದು ದಿನ ಕಾನಾನ್ ದೇಶಕ್ಕೆ ಹಿಂದಿರುಗುವರು ಎಂದು ಜ್ಞಾಪಕಕ್ಕೆ ತಂದನು. ಐಗುಪ್ತವು ಅವರ ಶಾಶ್ವತ ನಿವಾಸವಾಗಿರಲಿಲ್ಲವಾದ್ದರಿಂದ, ಅವರು ವಾಗ್ದತ್ತ ದೇಶಕ್ಕೆ ಹಿಂದಿರುಗುವ ವೇಳೆ ತನ್ನ ಮೂಳೆಗಳನ್ನು ಅವರೊಂದಿಗೆ ತೆಗೆದುಕೊಂಡು ಹೋಗಬೇಕೆಂದು ಯೋಸೇಫನು ಅವರಿಗೆ ಅಪ್ಪಣೆ ಕೊಟ್ಟನು. ಈ ಅಂತಿಮ ಮಾತುಗಳು 12ರಿಂದ 50 ಅಧ್ಯಾಯಗಳನ್ನು ಒಂದಾಗಿ ಜೋಡಿಸುತ್ತವೆ, ಮತ್ತು ಅವುಗಳು ವಾಚಕನನ್ನು ಮುಂಬರುವ ಘಟನೆಗಳಿಗೋಸ್ಕರ ಸಿದ್ಧಗೊಳಿಸುತ್ತವೆ.

## ಆದಿಕಾಂಡ ಮತ್ತು ಇತಿಹಾಸ

ವಂಶಾವಳಿಗಳು (1-11 ಅಧ್ಯಾಯಗಳು), ಮತ್ತು ಪೂರ್ವಜರ ಕಥಾನಿರೂಪಣೆಗಳಂತಹ (12-50 ಅಧ್ಯಾಯಗಳು), ಪ್ರಳಯಪೂರ್ವ ಘಟನೆಗಳ ಕುರಿತಾದ ಆದಿಕಾಂಡದ ಕಥನದಲ್ಲಿ, ಲೇಖಕನು ವ್ಯಕ್ತಿಗಳನ್ನು ನಿಜವಾದ ಐತಿಹಾಸಿಕ ಪಾತ್ರದಾರಿಗಳೆಂಬುದಾಗಿ ಮತ್ತು ಅವರ ಜೀವಿತದ ಘಟನೆಗಳನ್ನು ನಿಜವಾಗಿಯೂ ಕಾಲದಲ್ಲಿ ನಡೆದಿರುವಂಥವುಗಳೆಂದು ಚಿತ್ರಿಸಿರುತ್ತಾನೆ. ಪೂರ್ವಜರ ಐತಿಹಾಸಿಕತೆಯ ಕುರಿತು ಕೆಲವರು ಪ್ರಶ್ನೆ ಮಾಡಿರುವದಾದರೂ, ವಾಕ್ಯವನ್ನು ಮುಚ್ಚುಮರೆಯಿಲ್ಲದ ಓದುವಾಗ ವ್ಯಕ್ತಿಗಳು ಗೋತ್ರಗಳ ಮೂರ್ತೀಕರಣವಾಗಿರುವದಿಲ್ಲ ಅಥವಾ ಒಂದು ಫಲದಾಯಕ ಕಲ್ಪನಾಶಕ್ತಿಯ ಉತ್ಪನ್ನವಾಗಿರುವದಿಲ್ಲ ಎಂಬುದು ಗೊತ್ತಾಗುತ್ತದೆ. ಇತಿಹಾಸವು ಎಂದಿಗೂ ಪುನರಾಭಿಯನ, ಪುನರಾವರ್ತನೆ ಮಾಡಲ್ಪಡುವದಕ್ಕಾಗಲಿ, ಅಥವಾ ಸಂಪೂರ್ಣ ಖಚಿತತೆಯೊಂದಿಗೆ

ನಿಖರತೆಯನ್ನು ಪರೀಕ್ಷಿಸುವದಕ್ಕಾಗಲಿ ಸಾಧ್ಯವಿಲ್ಲದಂತಹ ವ್ಯಕ್ತಿಗಳು ಮತ್ತು ದೇಶಗಳ ಒಂದೇ-ಸಾರಿ-ಎಲ್ಲಾ ಕಾಲಕ್ಕೂ ಮಾತುಗಳ ಮತ್ತು ಘಟನೆಗಳಿಗೆ ಸಂಬಂಧಿಸಿದ್ದಾಗಿರುವದರಿಂದ, ಇತಿಹಾಸವು ಯಾವಾಗಲೂ ನಂಬಿಗಸ್ತಿಕೆಯಿಂದ ಸಂರಕ್ಷಿಸಿಡಲ್ಪಟ್ಟಿರುವ ಕಥನಗಳ - ಮೌಖಿಕವಾಗರಲಿ ಅಥವಾ ಲಿಖಿತವಾಗಿರಲಿ - ನಂಬಿಕೆಯ ಅಂಶವನ್ನೊಳಗೊಂಡಿರುತ್ತದೆ.

ಶಾಸ್ತ್ರಗಳ ಪ್ರೇರಣೆ ಮತ್ತು ಅಧಿಕಾರದಲ್ಲಿ ವಿಶ್ವಾಸಿಸುವವರು ಜಗತ್ತು ಮತ್ತು ಮಾನವರ ಸೃಷ್ಟಿ, ಪಾಪದ ಉಗಮ ಹಾಗೂ ಅದರ ಪರಿಣಾಮಗಳು, ಕರ್ತನು ಅಬ್ರಹಾಮ ಹಾಗೂ ಆತನ ಸಂತತಿಯರೊಳಗೆ ಕಾರ್ಯಸಾಧಿಸಲು ಆರಂಭಿಸಿದಂಥ ವಿಮೋಚನೆಯ ಯೋಜನೆ ಇವುಗಳ ವಿಷಯದಲ್ಲಿ ನಾವು ಏನನ್ನು ತಿಳಿದಿರಬೇಕೆಂದು ದೇವರು ಬಯಸುತ್ತಾನೋ ಅದನ್ನು ಸಂರಕ್ಷಿಸಿಡುವಂತೆ ಪವಿತ್ರಾತ್ಮನು ಬೈಬಲ್ ಲೇಖಕನ(ರ)ನ್ನು ಮಾರ್ಗದರ್ಶಿಸಿದನೆಂಬುದನ್ನು ಅಂಗೀಕರಿಸಿಕೊಳ್ಳುವರು. ಹೇಗೂ, ಆದಿಕಾಂಡ ಪುಸ್ತಕದಲ್ಲಿ ಪ್ರಸ್ತಾಪಿಸಲಾಗಿರುವ ಯಾವದೇ ಪೂರ್ಜಜರನ್ನು ವಿಶೇಷವಾಗಿ ಉಲ್ಲೇಖಿಸುವಂತಹ ಯಾವದೇ ವಿವಾಹ ದಸ್ತಾವೇಜಿನ ಪಾಪಿರಸ್ ಕಾಗದವಾಗಲಿ, ಚರ್ಮದ ಸುರುಳಿಯಾಗಲಿ, ಮಣ್ಣಿನ ಹಲಿಗೆಯಾಗಲಿ, ಅಥವಾ ಕಲ್ಲಿನ ಕೆತ್ತನೆಯಾಗಲಿ ದೊರೆತಿರುವದಿಲ್ಲ.[9]

ಇದರಲ್ಲಿ ಆಶ್ಚರ್ಯವೇನೂ ಇರುವದಿಲ್ಲ, ಯಾಕೆಂದರೆ ಪ್ರಾಚೀನ ಕಾಲಗಳಲ್ಲಿ ಬಹಳ ಕಡಿಮೆಯಾದ ಮಾಹಿತಿಯು ಮಾತ್ರವೇ ಬರೆಯಲ್ಪಡುವದಕ್ಕೆ ಸಮರ್ಪಿತವಾಗಿತ್ತು. ಅನೇಕ ವಿಶೇಷಜ್ಞರು ನಂಬುವದೇನೆಂದರೆ ಇದುವರೆಗೂ ನಾಶವಾಗದೆ ಇರಬಹುದಾದ ಬಹಳ ಕಡಿಮೆ ಸಂಖ್ಯೆಯ ವಾಕ್ಯಗಳು ಮಾತ್ರವೇ ಪ್ರಾಕ್ತನ ಶಾಸ್ತ್ರಜ್ಞರಿಂದ ಕಂಡು ಹಿಡಿಯಲ್ಪಡುತ್ತಿವೆ ಎಂಬುದೆ. ಅಷ್ಟುಮಾತ್ರವಲ್ಲದೆ, ಆದಿಕಾಂಡದಲ್ಲಿ ಬಣ್ಣಿಸಲ್ಪಟ್ಟಿರುವ ವ್ಯಕ್ತಿಗಳು ಪೂರ್ವ ದಿಕ್ಕಿನ ಹತ್ತಿರದ ಪ್ರಾಚೀನ ದೇಶದಲ್ಲಿ ಅವರು ಶ್ರೀಮಂತರು ಹಾಗೂ ಪ್ರಸಿದ್ಧರಾದ ವ್ಯಕ್ತಿಗಳಾಗಿರಲಿಲ್ಲ; ಬದಲಾಗಿ, ಅವರು ತಮ್ಮ ಜೀವನದ ಬಹಳಷ್ಟು ಕಾಲ, ಭೂಮಿಯ ಸುತ್ತಲೆಲ್ಲಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಿ ನೆಲೆಸುತ್ತಿದ್ದವರಾದ ಕಾರಣ ಅವರ ಯಾರ ಗಮನಕ್ಕೂ ಬಂದಿರಲೇ ಇಲ್ಲ. ಇದಕ್ಕೆ ಸೇರ್ಪಡೆಗೊಳ್ಳದ ಏಕೈಕ ವ್ಯಕ್ತಿಯೆಂದರೆ ಯೋಸೇಫನು, ಆತನು ಐಗುಪ್ತದಲ್ಲಿ ಸ್ವತಃ ಫರೋಹನ ನಂತರದಲ್ಲಿ ಅಧಿಕಾರದ ಸ್ಥಾನದಲ್ಲಿದ್ದ ಎರಡನೆಯ ವ್ಯಕ್ತಿಯಾಗಿ ಮಾಡಲ್ಪಟ್ಟಿದ್ದನು. ಆತನ ಹೆಸರು ಕಲ್ಲಿನಲ್ಲಿ ಕೆತ್ತಲ್ಪಟ್ಟಿದ್ದೇ ಆಗಿದ್ದಾಗ್ಯೂ, ಯೋಸೇಫನು ದ್ವೇಷಕ್ಕೊಳಗಾಗಿದ್ದ ಹೈಕ್ಸೊಸ ರಾಜವಂಶಕ್ಕೆ ಸೇರಿದ್ದವನಾಗಿದ್ದಲ್ಲಿ ಅದು ನಾಶವಾಗದೆ ಉಳಿದಿರಲಾರದು. ಇವರು ಐಗುಪ್ತರಲ್ಲದವರು, ಸಿರಿಯ ಮತ್ತು ಕಾನಾನ್ ದೇಶಗಳಿಗೆ ಸೇರಿದ ಯೆಹೂದಿ ಹಿನ್ನಲೆಯ ದೊರೆಗಳಾಗಿದ್ದರು, ಇವರು ಐಗುಪ್ತವನ್ನು 100ರಿಂದ 150 ವರ್ಷಗಳ ಕಾಲ ಆಳ್ವಿಕೆ ಮಾಡಿದ್ದರು. ಅವರನ್ನು ಹೊರಗೆ ಓಡಿಸಿದ ವೇಳೆ, ಅವರ ಹೆಸರುಗಳನ್ನು ನಾಶಮಾಡಿ ಅವರ ನೆನಪನ್ನು ಸಂಪೂರ್ಣ ಅಳಿಸಿ ಹಾಕುವದಕ್ಕಾಗಿ ಸಾಧ್ಯವಾದದ್ದನ್ನೆಲ್ಲಾ ಮಾಡಿದರು.[10] ಹೇಗೂ, ಯೋಸೇಫನು ಹೈಕ್ಸೊಸ ಅರಸರಗಿಂತ ಮುಂಚಿನ ಕಾಲದಲ್ಲಿ ಜೀವಿಸಿರಬಹುದಾಗಿದೆ.

## ಪ್ರಾಕ್ತನ ಶಾಸ್ತ್ರ ಮತ್ತು ಪೂರ್ವಜರ ಹೆಸರುಗಳು

ಪ್ರಾಕ್ತನ ಶಾಸ್ತ್ರವು ವ್ಯಕ್ತಿಪರ ಪೂರ್ವಜರ ಐತಿಹಾಸಿಕತನವನ್ನು ದೃಢೀಕರಿಸಿರುವದಿಲ್ಲವಾದರೂ ಮತ್ತು ಕೆಲವು ಪಂಡಿತರು ಬೈಬಲಿನ ಕಥನಗಳ ಮತ್ತು ಪುರಾತನ ಮೆಸಪೊಟಾಮ್ಯದ ಸಂಸ್ಕೃತಿಯ ಆಚಾರಗಳ ನಡುವೆ ಸಮಾನಾರ್ಥಗಳನ್ನುಂಟು

ಮಾಡುವದಕ್ಕೆ ಅತಿಯಾದ ಆಸಕ್ತಿಯನ್ನು ತೋರಿಸುತ್ತಿದ್ದಾರಾದರೂ, ಆದಿಕಾಂಡ ಪುಸ್ತಕದಲ್ಲಿ ಕಂಡು ಬರುವ ಅನೇಕ ವಿವರಗಳು ಅದರಲ್ಲಿರುವ ವಿಷಯದ ಪ್ರಾಚೀನತೆಯನ್ನು ಪ್ರಾಮಾಣೀಕರಿಸುತ್ತವೆ. ಕೆಲವು ವಿಮರ್ಶಕ ಪಂಡಿತರು ವಾದಿಸಿರುವ ಪ್ರಕಾರ, ಲಭ್ಯವಿರುವ ಪುರಾವೆಯು ಈ ಘಟನೆಗಳನ್ನು ಅವುಗಳು ಬಣ್ಣಿಸುತ್ತೇನೆಂದು ಹೇಳುವ ಕಥನಗಳ ನಂತರದ 1,000ರಿಂದ 1,500 ವರ್ಷಗಳ ನಂತರದಲ್ಲಿ ಯೆಹೂದಿ ಲೇಖಕರು ಹುಟ್ಟು ಹಾಕಿರುವಂಥವುಗಳಾಗಿರುವ ಸಾಧ್ಯತೆಯು ಬಹಳ ಕಡಿಮೆಯಿರುತ್ತದೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಅದಕ್ಕೆ ತದ್ವಿರುದ್ಧವಾಗಿ, ಪ್ರಾಚೀನ ವಾಕ್ಯಗಳು ಹಲವಾರು ಆಯಾಮಗಳಲ್ಲಿ ಬೈಬಲಿನ ಕಥನಗಳಿಗೆ ಆಧಾರವನ್ನು ಒದಗಿಸುತ್ತವೆ.

ಮೊದಲನೆಯದಾಗಿ, ಪೂರ್ವಜರ ಕಥೆಗಳಲ್ಲಿನ ಹೆಸರುಗಳು ಕ್ರಿ.ಪೂ. ಎರಡನೆಯ ಸಹಸ್ರಮಾನದ ಆರಂಭದಲ್ಲಿ ಮೆಸಪೋತಾಮ್ಯದಲ್ಲಿ ಬಳಸಲ್ಪಡುತ್ತಿದ್ದ ಹೆಸರುಗಳಿಗೆ ನಿಖರವಾಗಿ ಸರಿಹೊಂದುತ್ತವೆ, ಉದಾಹರಣೆಗೆ "ಸೆರುಗ" (ಅಬ್ರಹಾಮನ ಮುತ್ತಜ್ಜ), "ನಾಹೋರ" (ಅಬ್ರಹಾಮನ ಸಹೋದರನು), ಮತ್ತು "ಯಾಕೋಬ" (ಅಬ್ರಹಾಮನ ಮೊಮ್ಮಗ).

ಎರಡನೆಯದಾಗಿ, ತೆರಹ, ಅಬ್ರಹಾಮ, ಮತ್ತು ನಾಹೋರನ ಮೂಲ ಮನೆಯು ಕೆಳ ಯೂಫ್ರೇಟಿಸ್ ಬಳಿಯಲ್ಲಿರುವ ಊರ್ ಎಂಬಲ್ಲಿ ಇತ್ತೆಂಬುದಾಗಿ, ಮತ್ತು ದೇವರು ಕರೆಯುವದಕ್ಕೆ ಮುನ್ನ, "ಅನ್ಯದೇವತೆಗಳನ್ನು ಪೂಜಿಸುತ್ತಿದ್ದರು" (ಯೆಹೋಶುವ 24:2) ಎಂಬುದಾಗಿ ಬೈಬಲ್ ಕಥನವು ತಿಳಿಸುತ್ತದೆ. "ಲಾಬಾನ," "ಸಾರಳು," "ಮಿಲ್ಕಾ," ಮತ್ತು "ತೆರಹ" ಎಂಬ ಹೆಸರುಗಳು ಚಂದ್ರನ ಆರಾಧನೆಯೊಂದಿಗೆ ಸಂಬಂಧ ಪಟ್ಟಿರುವಂತೆ ಕಾಣಿಸುತ್ತವೆ, ಚಂದ್ರ ದೇವರು ಹಾಗೂ ದೇವತೆಗಳು ಆ ಪ್ರಾಚೀನ ಪಟ್ಟಣದಲ್ಲಿ ಪ್ರಧಾನವಾಗಿದ್ದರು, ಮತ್ತು ಅಬ್ರಹಾಮನ ಕುಟುಂಬವು ವಾಸಿಸುತ್ತಿದ್ದ ಹಾರಾನಿನಲ್ಲಿ ಸಹ ಪ್ರಧಾನವಾಗಿದ್ದರು.[11]

ಮೂರನೆಯದಾಗಿ, "ಅಬ್ರಹಾಮ," "ಇಸಾಕ," "ಇಸ್ಮಾಯೇಲ," "ಯಾಕೋಬ," "ಯೋಸೇಫ," "ಜೆಬುಲೂನ," ಅಷೇರ," "ಇಸ್ಸಾಕಾರ," "ಬೆನ್ಯಾಮೀನ," ಮತ್ತು ಇತರ ಹೆಸರುಗಳು ಯೂಫ್ರೇಟಿಸ್ ಮಧ್ಯಭಾಗ ಮತ್ತು ಒಳನಾಡುಗಳಲ್ಲಿ ದೊರೆತ ಹಲವಾರು ವಸ್ತುಗಳ ಮೇಲೆ ಕಂಡು ಹಿಡಿಯಲ್ಪಟ್ಟಿರುತ್ತವೆ, ಇವೆಲ್ಲವೂ ಇದೇ ಕಾಲಮಾನಕ್ಕೆ ಸೇರಿದವುಗಳಾಗಿವೆ. ಇವುಗಳಲ್ಲಿ ಕೆಲವು ಹೆಸರುಗಳು ಮೊದಲ ಸಹಸ್ರಮಾನದಲ್ಲಿನ ವಾಕ್ಯಗಳಲ್ಲಿ ಕಂಡು ಬರುತ್ತವಾದರೂ, ಇದು ಅವುಗಳ ಪ್ರಾಚೀನತೆಯ ಛಾಪನ್ನು ಯಾವ ವಿಧದಲ್ಲಿಯೂ ಮಂದಗೊಳಿಸುವದಿಲ್ಲ ಯಾಕೆಂದರೆ ಹೆಸರುಗಳು ಆರಂಭಿಕ ವಿಧದವುಗಳಾಗಿವೆ. ಎರಡನೆಯ ಸಹಸ್ರಮಾನದ ಮೊದಲ ಭಾಗದಲ್ಲಿ ಅವುಗಳ ಜನಪ್ರಿಯತೆಯನ್ನು ಬೇರೆ ಯಾವದೇ ಕಾಲಾವಧಿಯೊಂದಿಗೆ ಸಮಾನಾರ್ಥಗೊಳಿಸಲು ಸಾಧ್ಯವಿಲ್ಲ.[12]

## ಪ್ರಾಕ್ತನ ಶಾಸ್ತ್ರ ಮತ್ತು ಪೂರ್ವಜರ ಸಾಂಸ್ಕೃತಿಕ ಆಚಾರಗಳು

ಆದಿಕಾಂಡದಲ್ಲಿ ಕುಟುಂಬ ವಿಷಯಗಳು ಬಹಳ ಪ್ರಾಮುಖ್ಯವಾದ್ದರಿಂದ, ಪಂಡಿತರು ಪೂರ್ವಜರ ವಿವಾಹ ಪದ್ಧತಿಗಳನ್ನು, ಬಾಧ್ಯತೆ, ಹೂಣಲ್ಪಡುವಿಕೆ, ಮತ್ತು ಇತ್ಯಾದಿ ಸಂಗತಿಗಳನ್ನು ಪ್ರಾಚೀನ ಮೆಸಪೋತಾಮ್ಯದಲ್ಲಿ ವಾಸಿಸುತ್ತಿದ್ದ ಬೇರೆ ಜನರ ಸಾಂಸ್ಕೃತಿಕ ಆಚಾರಗಳೊಂದಿಗೆ, ಅವರ ವಾಕ್ಯಗಳಲ್ಲಿ ಬರೆದಿರುವ ಪ್ರಕಾರವಾಗಿ ಹೋಲಿಕೆ ಮಾಡಿರುವದು ಸ್ವಾಭಾವಿಕವೇ ಆಗಿರುತ್ತದೆ. ಹೇಗೂ, ಒಬ್ಬನು ಈ ವಿಷಯದಲ್ಲಿ ಬಹಳ ದೂರಕ್ಕೆ ಹೋಗಬಹುದಾಗಿದೆ, ಸಮಾನಾರ್ಥಗಳಿಗೆ ಅತಿಯಾಗಿ ಒತ್ತು ಕೊಟ್ಟು ಆದಿಕಾಂಡ ಮತ್ತು ಇತರ

ಪ್ರಾಚೀನ ಆಚಾರಗಳ ನಡುವೆ ತಪ್ಪಾದ ಹೋಲಿಕೆಗಳನ್ನು ಮಾಡುವ ಸಾಧ್ಯತೆಯಿರುತ್ತದೆ. ಇನ್ನೊಂದು ಕಡೆಯಲ್ಲಿ, ಅನಂತರದ ಒಂದು ಕಾಲದ ಬದಲಾಗಿ, ಪೂರ್ವಜರ ಆಚಾರಗಳು ಕ್ರಿ.ಪೂ. ಎರಡನೆಯ ಸಹಸ್ರಮಾನಕ್ಕೆ ನಿಶ್ಚಯವಾಗಿಯೂ ಸರಿಹೊಂದುವಂತಹ ಮೂರು ಕ್ಷೇತ್ರಗಳಿರುತ್ತವೆ.

ಮೊದಲನೆಯದಾಗಿ, ಆದಿಕಾಂಡ 25:23ರಲ್ಲಿ ಹಿರಿಯ ಮಗನನ್ನು ಸೂಚಿಸುವದಕ್ಕೆ רַב (*ರಾಬ*) ಎಂಬ ಇಬ್ರಿಯ ಪದವು ಬಳಸಲ್ಪಟ್ಟಿದೆ, ಅಲ್ಲಿ ಏಸಾವ ಮತ್ತು ಯಾಕೋಬರ ವಿಷಯವಾಗಿ ಕರ್ತನು ಈ ವಿಧವಾಗಿ ಹೇಳುತ್ತಾನೆ, "ಹಿರಿಯರದು ಕಿರಿಯದಕ್ಕೆ ಸೇವೆ ಮಾಡುವದು." ಕ್ರಿ.ಪೂ. ಎರಡನೆಯ ಸಹಸ್ರಮಾನದ ಮಧ್ಯಭಾಗಕ್ಕೆ ಸೇರಿದ ಹಲವಾರು ಪ್ರಾಚೀನ ವಾಕ್ಯಗಳಲ್ಲಿ, "ಹಿರಿಯ" ಮಗನನ್ನು ಸೂಚಿಸುವದಕ್ಕೆ *ರಾಬ* ಎಂಬ ಅದೇ ಪದವು ಬಳಸಲ್ಪಟ್ಟಿದೆ; ಹೇಗೂ, ಈ ಪದದ ಅನಂತರದ ಬಳಕೆಯು ಬೇರೆ ರೂಪಗಳನ್ನು ಪಡೆದುಕೊಳ್ಳುತ್ತದೆ, ಮತ್ತು ಇದು ಆದಿಕಾಂಡ ಪುಸ್ತಕದ ಕಥನದ ಪ್ರಾಚೀನತೆಗೆ ಒಂದು ಬಲವಾದ ಸೂಚನೆಯಾಗಿರುತ್ತದೆ.[13]

ಎರಡನೆಯದಾಗಿ, ಒಬ್ಬ ದಾಸನನ್ನು ವಾರಸುದಾರನಾಗಿ ದತ್ತು ಪಡೆಯುವದು ಪೂರ್ವಜರ ಕಾಲದಲ್ಲಿದ್ದ ಆಚಾರವಾಗಿತ್ತು. ನೂಝಿ ಶಿಲಾಶಾಸನಗಳ ಪ್ರಕಾರ, ಪುತ್ರನಿಲ್ಲದ ದಂಪತಿಗಳು ಒಬ್ಬ ಪುತ್ರನನ್ನು ದತ್ತು ಪಡೆಯಬಹುದಿತ್ತು, ಮತ್ತು ಆತನು ತಂದೆತಾಯಿಗಳನ್ನು ಅವರು ಜೀವಿಸುವಷ್ಟು ಕಾಲ ಆರೈಕೆ ಮಾಡುವ ಹೊಣೆಯನ್ನು ಹೊಂದಿರುತ್ತಿದ್ದನು. ಅವರು ಮರಣಿಸಿದಾಗ, ಆತನು ಅವರನ್ನು ಸಮರ್ಪಕವಾದ ರೀತಿಯಲ್ಲಿ ಹೂಣಿಡಬೇಕಿತ್ತು ಮತ್ತು ಅವರಿಗಾಗಿ ಶೋಕಿಸಬೇಕಿತ್ತು, ಮತ್ತು ಅದಕ್ಕೆ ಪ್ರತಿಯಾಗಿ, ದತ್ತು ಸ್ವೀಕರಿಸಲ್ಪಟ್ಟ ಪುತ್ರನು ಅವರ ಸ್ವತ್ತುಗಳನ್ನೆಲ್ಲಾ ಬಾಧ್ಯವಾಗಿ ಪಡೆಯುವವನಾಗಿದ್ದನು.[14] ಅಬ್ರಹಾಮನಿಗೆ ಗಂಡು ವಾರಸುದಾರನು ಇಲ್ಲದ್ದರಿಂದ ಮತ್ತು ಹೆಚ್ಚುಕಡಿಮೆ ಎಂಭತ್ತೈದು ವಯಸ್ಸಿನವನಾಗಿದ್ದರಿಂದ ದಮಸ್ಕದ ಎಲೀಯೆಜರನ (15:2-4) ವಿಷಯದಲ್ಲಿ ಅದನ್ನೇ ಮಾಡಬೇಕೆಂದಿದ್ದನು (ನೋಡಿರಿ 12:4; 16:3). ಹೇಗೂ, ಈ ಆಚಾರವು ಕ್ರಿ.ಪೂ. ಪ್ರಥಮ ಸಹಸ್ರಮಾನಕ್ಕೆ ಸರಿಹೊಂದುವದಿಲ್ಲ ಯಾಕೆಂದರೆ, ಮೋಶೆಯ ಧರ್ಮಶಾಸ್ತ್ರದ ಪ್ರಕಾರವಾಗಿ, ಇಸ್ರಾಯೇಲ್ಯರು ವಾಗ್ದಾನ ದೇಶವನ್ನು ಸ್ವಾಧೀನಪಡಿಸಿಕೊಂಡ ವೇಳೆ, ಅದರ ಬಾಧ್ಯತೆಯು ಗೋತ್ರದ ಕುಟುಂಬದೊಳಗೆ ಉಳಿಯತಕ್ಕದ್ದಾಗಿತ್ತು (ಅರಣ್ಯಕಾಂಡ 27:1-11; 36:1-12).

ಮೂರನೆಯದಾಗಿ, ಪೂರ್ವಜರ ಧಾರ್ಮಿಕ ಮತ್ತು ನೈತಿಕ ಪದ್ಧತಿಗಳು ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿದ್ದ ಆಚಾರಗಳಿಗಿಂತಲೂ ಮುಂಚಿನ ಕಾಲದ ಆಚಾರಗಳನ್ನು ಪ್ರತಿಫಲಗೊಳಿಸುತ್ತವೆ; ವಾಸ್ತವಿಕದಲ್ಲಿ, ಅವುಗಳು ಅನಂತರದಲ್ಲಿ ಧರ್ಮಶಾಸ್ತ್ರವು ಅಗತ್ಯವೆನ್ನುವ ಆಚಾರಗಳಿಗೆ ತದ್ವಿರುದ್ಧವಾಗಿರುತ್ತವೆ. ಇದರ ಒಂದು ದೃಷ್ಟಾಂತವು ಆದಿಕಾಂಡ 20:12ರಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ, ಅಬ್ರಹಾಮನು ತನ್ನ ಮಲತಂಗಿಯಾದ ಸಾರಳನ್ನು ಮದುವೆ ಮಾಡಿಕೊಂಡಿದ್ದನು. ಹೇಗೂ, ಇದು ಯಾಜಕಕಾಂಡ 18:9ರಲ್ಲಿ ನಿರ್ದಿಷ್ಟವಾಗಿ ನಿಷೇಧಿಸಲ್ಪಟ್ಟಿರುವ ಸಂಗತಿಯಾಗಿದೆ. ಅಷ್ಟು ಮಾತ್ರವಲ್ಲದೆ, ಆದಿಕಾಂಡ 29:21-30 ವಚನಗಳು ಯಾಕೋಬನು ಇಬ್ಬರು ಸಹೋದರಿಯರನ್ನು ಮದುವೆಯಾದನೆಂದು ಹೇಳುತ್ತದೆ: ರಾಹೇಲ ಹಾಗೂ ಲೇಯಳು. ಹಾಗಿದ್ದರೂ, ಯಾಜಕಕಾಂಡ 18:18ರಲ್ಲಿ ಕಠಿಣವಾಗಿ ನಿಷೇಧಿಸಲ್ಪಟ್ಟಿದೆ. ಅಷ್ಟೇ ಅಲ್ಲದೆ, ಅದಿಕಾಂಡ 28:10-19 ಹೇಳುವದೇನೆಂದರೆ "ಯೆಹೋವನು" ಯಾಕೋಬನಿಗೆ ಒಂದು ಕನಸಿನಲ್ಲಿ ಕಾಣಿಸಿಕೊಂಡನು ಮತ್ತು ಆಶೀರ್ವದಿಸಿದನು; ಮತ್ತು ಪೂರ್ವಜನು ಎಚ್ಚರಗೊಂಡಾಗ, ಆ ಸ್ಥಳದಲ್ಲಿ ದೇವರ ಪ್ರಸನ್ನತೆಯಿರುವದಕ್ಕೆ

ಸ್ಮರಣಾರ್ಥವಾಗಿ ಒಂದು ಸ್ತಂಭವನ್ನು ನಿಲ್ಲಿಸಿದನು. ಮೇಲ್ಕಂಡಂತಹ ಆಚಾರಗಳು ಸಹ ಪಂಚಪುಸ್ತಕದ ಧರ್ಮಶಾಸ್ತ್ರದಲ್ಲಿ ಖಂಡಿತವಾಗಿಯೂ ಖಂಡಿಸಲ್ಪಟ್ಟಿರುತ್ತೆ ಯಾಕೆಂದರೆ ಅವುಗಳಿಂದಾಗಿ ಇಸ್ರಾಯೇಲ್ಯರು ವಿಗ್ರಹಾರಾಧನೆಗೆ ಸಂಬಂಧ ಹೊಂದಿರುವಂತಹ ಕಾನಾನ್ಯರ ಧಾರ್ಮಿಕ ವಿಧಿಗಳಲ್ಲಿ ತೊಡಗಿಸಿಕೊಳ್ಳಬಹುದಾದ ಅಪಾಯಗಳಿದ್ದವು (ಯಾಜಕಕಾಂಡ 26:1; ಧರ್ಮೋಪದೇಶಕಾಂಡ 16:21, 22). ಈ ಎಲ್ಲಾ ಅವಲೋಕನಗಳು ಪೂರ್ವಜರ ಕಥೆಗಳು ಐತಿಹಾಸಿಕ ಮತ್ತು ಮೊದಲ ಸಹಸ್ರಮಾನದಲ್ಲಿ ಜೀವಿಸುತ್ತಿದ್ದ ತರುವಾಯ ಬಂದ ಯೆಹೂದ್ಯ ಲೇಖಕರಿಂದ ಸೃಷ್ಟಿಸಲ್ಪಟ್ಟವುಗಳಲ್ಲ ಎಂಬುದನ್ನು ಬಲವಾಗಿ ಸೂಚಿಸುತ್ತವೆ.

# ಧಾರ್ಮಿಕ ಬೋಧನೆ[15]

## ಸೃಷ್ಟಿಯಲ್ಲಿ ದೇವರ ಉದ್ದೇಶ (ಅಧ್ಯಾಯ 1)

ಆದಿಕಾಂಡ ಪುಸ್ತಕದ ಮುಖ್ಯ ವಿಷಯವು ದೇವರೇ ಆಗಿದ್ದಾನೆ, ಅದೇ ರೀತಿಯಲ್ಲಿಯೇ ಆತನು ಇಡೀ ಬೈಬಲಿನ ಮುಖ್ಯ ವಿಷಯವಾಗಿದ್ದಾನಷ್ಟೆ. ಆತನು ಸೃಷ್ಟಿಯ ಸಾರ್ವಭೌಮ ಕರ್ತನು, ಆತನು ತಾನು ಮಾಡುವ ಕ್ರಿಯೆಗಳಿಂದ ತನ್ನ ಸ್ವಭಾವವನ್ನು ಪ್ರಕಟಿಸಿಕೊಳ್ಳುವವನು. ದೇವರು ಸಕಲ ನಿಷ್ಪ್ರಾಣವುಳ್ಳ ಮತ್ತು ಪ್ರಾಣವುಳ್ಳ ಜೀವವನ್ನು ಮನುಷ್ಯನಿಗೆ ಒಂದು ಆಶೀರ್ವಾದವಾಗಿರಲಿ ಎಂದು ಸೃಷ್ಟಿಸಿದನು, ಆತನು ಸೃಷ್ಟಿಯನ್ನು "ಒಳ್ಳೇದು" ಎಂದು ಘೋಷಿಸಿದ್ದು ಮಾತ್ರವೇ ಅಲ್ಲ, ಆದರೆ "ಬಹಳ ಒಳ್ಳೇದು" ಎಂದು ಸಹ ಹೇಳಿದನು (1:4, 10, 12, 18, 21, 25, 31). ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದಾಗ ತನ್ನ ಒಳ್ಳೇತನ ಹಾಗೂ ಪ್ರೀತಿಯನ್ನು ಇನ್ನಷ್ಟು ತೋರಿಸಿ ಕೊಟ್ಟನು, ಆತನನ್ನು ಆಶೀರ್ವದಿಸಿ ಅವನೊಂದಿಗೆ ಒಂದು ವೈಯಕ್ತಿಕ ಸಂಬಂಧವನ್ನಿಟ್ಟುಕೊಳ್ಳಬೇಕೆಂಬುದು ದೇವರ ಇಚ್ಛೆಯಾಗಿತ್ತು. ಮನೆವಾರ್ತೆಯವನಾಗಿ ಮನುಷ್ಯನ ಕೆಲಸವು ಎಲ್ಲಾ ಸೃಷ್ಟಿಯ ಮೇಲೆ ದೊರೆತನವನ್ನು ಹೊಂದುವದಾಗಿತ್ತು ಮತ್ತು ಅವುಗಳನ್ನು ದೇವರ ಚಿತ್ತದಡಿಯಲ್ಲಿ ತರುವದು ಆಗಿತ್ತು, ಆದರೆ ಮನುಷ್ಯನು ಮೊದಲು ಸಾರ್ವಭೌಮ-ಸೃಷ್ಟಿಕರ್ತನ ಚಿತ್ತದಂತೆ ನಡೆಯುವದನ್ನು ಕಲಿತುಕೊಳ್ಳಬೇಕಾಗಿತ್ತು.

## ದೇವರು ತನ್ನ ಸೃಷ್ಟಿಗಳಿಗಾಗಿ ಮಾಡಿದ ಏರ್ಪಾಡುಗಳು (ಅಧ್ಯಾಯಗಳು 2; 3)

ದೇವರು ಆಕಾಶ ಮತ್ತು ಭೂಮಿಗಳನ್ನು ಹಾಗೂ ಅವುಗಳಲ್ಲಿರುವ ಸಮಸ್ತವನ್ನು ಉಂಟು ಮಾಡಿದ ಬಳಿಕ ವಿಶ್ರಮಿಸಿಕೊಂಡನು. ಆತನು ಒಂದು ಸುಂದರವಾದ ತೋಟವನ್ನು ಒದಗಿಸಿದನು ಮತ್ತು ಅದರಲ್ಲಿ ಎಲ್ಲಾ ವಿಧವಾದ ಪ್ರಾಣಿಗಳನ್ನು ಹಾಗೂ ಪಕ್ಷಿಗಳನ್ನು ತುಂಬಿಸಿದನು, ಅದು ಮಾನವನಿಗಾಗಿ ಒಂದು ಪರಿಪೂರ್ಣವಾದ ವಾತಾವರಣವಾಗಿತ್ತು. ಆತನು ಮಾನವನಿಗೆ ಸರಿಹೊಂದುವಂಥ ಸಹಾಯಕಳಾಗಿ ಒಬ್ಬ ಸ್ತ್ರೀಯನ್ನು ಸಹ ಉಂಟು ಮಾಡಿದನು, ಮಾನವನು ಆಕೆಯೊಂದಿಗೆ ಆಳವಾದ ಮಾನವ ಮಟ್ಟದಲ್ಲಿ ವೈಯಕ್ತಿಕ ಸಂಬಂಧವನ್ನಿಟ್ಟುಕೊಳ್ಳುವಂತೆ ಆಕೆಯನ್ನು ಉಂಟು ಮಾಡಿದನು. ಅದರ ಜೊಗೆತೆ, ದೈಹಿಕ ಪೋಷಣೆಗಾಗಿ, ದೇವರು ಎಲ್ಲಾ ವಿಧವಾದ ಒಳ್ಳೇ ಹಣ್ಣುಗಳ ಮರಗಳನ್ನು ಬೆಳೆಯುವಂತೆ ಮಾಡಿದನು, ಅವುಗಳಲ್ಲಿ ತೋಟದ ಮಧ್ಯದಲ್ಲಿದ್ದ ಜೀವವೃಕ್ಷದ ಮರವೂ ಸೇರಿತ್ತು. ತೋಟವನ್ನು ಆರೈಕೆ ಮಾಡಿ ಕಾಯಬೇಕೆಂದು ದೇವರು ಮನುಷ್ಯನಿಗೆ ಅಪ್ಪಣೆ ಕೊಟ್ಟನು.

ಕರ್ತನು ಒಂದೇ ಒಂದು ನಿಷೇಧವನ್ನು ನೀಡಿದ್ದನು, ಏನೆಂದರೆ ಪುರುಷ ಮತ್ತು ಸ್ತ್ರೀಯು ಒಳ್ಳೇದರ ಮತ್ತು ಕೆಟ್ಟದ್ದರ ಅರುಹು ಹುಟ್ಟಿಸುವ ಮರದ ಹಣ್ಣನ್ನು ತಿನ್ನಬಾರದಿತ್ತು. ಹೇಗೂ, ದೇವರ ಹಾಗೆ ಆಗಬೇಕೆಂದು ಬಯಸುವವರಾಗಿ ಮತ್ತು ಆತನ ಚಿತ್ತಕ್ಕೆ ಅಧೀನಪಡಿಸಿಕೊಳ್ಳಲು ನಿರಾಕರಿಸುವವರಾಗಿ, ಆದಾಮ ಮತ್ತು ಹವ್ವರು ಮಾನವರ ಅವಿಧೇಯತೆಗೆ ಹಾಗೂ ಒಂದೇ ವಿಧವಾದ ದುರಂತರಕ ಫಲಿತವನ್ನು - ಮರಣ - ಹೊಂದಿರುವಂಥ ದೇವರಿಂದ ಬೇರ್ಪಡುವಿಕೆಗೆ ಮಾದರಿಯೊಂದನ್ನು ಹಾಕಿ ಕೊಟ್ಟರು.

## ಪಾಪದ ವಿರುದ್ಧವಾಗಿ ದೇವರ ರೌದ್ರ (ಅಧ್ಯಾಯಗಳು 4-8)

ಸೃಷ್ಟಿಕರ್ತನಿಗೆ ಮಾನವನು ತೋರಿಸಿದ ಕೆಲವೊಂದು ಪ್ರತಿಕ್ರಿಯೆಗಳು, ಹೇಬೆಲನ ವಿಷಯದಲ್ಲಿ ನೋಡುವ ಹಾಗೆ, ಪ್ರಾಮಾಣಿಕವಾದ ಭಕ್ತಿ ಹಾಗೂ ಆರಾಧನೆಗಳಿಂದ ಕೂಡಿದ್ದವು. ಅಲ್ಲದೆ ಸ್ವೀಕಾರರ್ಹವಲ್ಲದ ಧಾರ್ಮಿಕ ಚಟುವಟಿಕೆಗಳು ಸಹ ಇದ್ದವು, ಕಾಯಿನನ ವಿಷಯದಲ್ಲಿ ಅದನ್ನು ಕಾಣುತ್ತೇವೆ, ಆತನು ತನ್ನ ತಮ್ಮನನ್ನು ಕೊಲೆ ಮಾಡಿದನು ಹಾಗೂ ಕರ್ತನ ಸನ್ನಿಧಿಯಿಂದ ಹೊರಹಾಕಲ್ಪಟ್ಟನು. ಕಾಯಿನನು ಒಬ್ಬ ತಪ್ಪಿಸಿಕೊಂಡು ತಿರುಗಾಡುವ ಅಪರಾಧಿಯಾಗಿ ದಂಡನೆಯನ್ನು ದೇವರಿಂದ ಅನುಭವಿಸಿದನು. ಆತನ ಸಂತಾನದವರು ಸಂಸ್ಕೃತಿಯನ್ನು - ಸಂಗೀತ ಮತ್ತು ಕಲೆ, ಲೋಹಗಳ ಬಳಕೆ, ಮತ್ತು ಪಟ್ಟಣವೊಂದರ ನಿರ್ಮಾಣ - ಆರಂಭಿಸಿದವರೆಂಬ ಶ್ರೇಯಸ್ಸನ್ನು ಹೊಂದಿದ್ದಾರಾದರೂ ಪಾಪದ ಶಾಪವು ಅವರ ಮೇಲಿತ್ತು.

ಅನೇಕ ತಲೆಮಾರುಗಳ ಬಳಿಕವೂ ಅವರೊಳಗೆ ಪಾಪವು ಇರುವಿಕೆಯು ಸ್ಪಷ್ಟವಾಗಿ ಕಾಣಿಸುತ್ತಿತ್ತು, ಯಾಕೆಂದರೆ ಕಾಯಿನನ ಸಂತತಿಯಿಂದ ಬಂದವರು ಅಹಂಕಾರಿಗಳು ಮತ್ತು ದೇವರಿಗೆ ಅವಿಧೇಯರು ಆಗಿದ್ದರು. ಅವರು ದ್ವೇಷ ಹಾಗೂ ಅಸೂಯೆಯಿಂದ ತುಂಬಿದ್ದರು ಮತ್ತು ಅವರು ಹಗೆತನ ಹಾಗೂ ಅನ್ಯಾಯದ ಲೋಕವೆಂದು ಭಾವಿಸಿಕೊಂಡಿದ್ದರ ಕಡೆಗೆ ಪ್ರತಿದಾಳಿಯನ್ನು ನಡಿಸುತ್ತಿದ್ದರು. ಉದಾಹರಣೆಗೆ, ಅವರಲ್ಲಿ ಲೆಮೆಕ ಎಂಬವನೊಬ್ಬನು ಪ್ರತೀಕಾರದಿಂದ ತುಂಬಿದ್ದನು, ಒಬ್ಬ ಯುವಕನು ತನಗೆ ಹೊಡೆದನೆಂಬ ಒಂದೇ ಕಾರಣಕ್ಕೆ ಅವನನ್ನು ಕೊಂದೆನು ಎಂಬುದಾಗಿ ಬಡಾಯಿ ಕೊಚ್ಚಿಕೊಂಡನು (4:23, 24).

ಬೇರೆ ಅನೇಕರ ಜೀವಿತಗಳು ಕೇವಲ ದೈಹಿಕವಾಗಿ ಇರುವವುಗಳೆಂದಷ್ಟೆ ಬಣ್ಣಿಸಲ್ಪಟ್ಟಿವೆ; ಅಂದರೆ, ಅವರು ಹುಟ್ಟಿದ್ದರು, ಮಕ್ಕಳನ್ನು ಹಡೆದರು, ಮತ್ತು ಮರಣಿಸಿದರು, ಸ್ಪಷ್ಟವಾಗಿರುವಂತೆ ದೇವರೊಂದಿಗೆ ಒಂದು ಸಂಬಂಧವನ್ನಿಟ್ಟುಕೊಳ್ಳದವರಾಗಿದ್ದರು (ಅಧ್ಯಾಯ 5). ಆ ವಿಧವಾಗಿ ದೇವರ ಅನುಪಸ್ಥಿತಿಯು ಮಾನವರ ಜೀವಿತಗಳಲ್ಲಿ ಅರ್ಥ ಹಾಗೂ ಉದ್ದೇಶಗಳಿಲ್ಲದಂತೆ ಮಾಡಿತ್ತು, ಅದು ಆ ಮೂಲಕವಾಗಿ "ದೇವಪುತ್ರರು" ಹಾಗೂ "ಮನುಷ್ಯಪುತ್ರಿಯರ" ನಡುವೆ ಭಕ್ತಿಹೀನವಾದ ಐಕ್ಯತೆಯನ್ನಿಟ್ಟುಕೊಳ್ಳುವದರಲ್ಲಿ ಫಲಿತ ಗೊಂಡಿತ್ತು (6:2). ಅದರ ಫಲಿತವು ಕೆಳಮಟ್ಟಕ್ಕೆ ಉರುಳುತ್ತಾ ಸಾಗಿ ಕೊನೆಗೆ ಮನುಷ್ಯನ ಪ್ರತಿಯೊಂದು ಆಲೋಚನೆ ಹಾಗೂ ಕಲ್ಪನೆಯು ನಿರಂತರವಾಗಿ ಕೆಟ್ಟದ್ದಾಗಿ ಮಾರ್ಪಟ್ಟಿದ್ದವು, ಮತ್ತು ಭೂಮಿಯಲ್ಲೆಲ್ಲಾ ಹಿಂಸೆಯು ತುಂಬಿ ಹೋಗಿತ್ತು (6:5). ತತ್ಪರಿಣಾಮವಾಗಿ, ಮನುಷ್ಯನು ತನ್ನನ್ನು ತಾನೇ ಮತ್ತು ಲೋಕವನ್ನು ನಾಶಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿದ್ದದರಿಂದ, ದೇವರು ತನ್ನ ಕೋಪದ ಅಂತಿಮ ಪ್ರದರ್ಶನವಾಗಿ, ಭೂಮಿಯ ಮೇಲೆ ಪ್ರಳಯವನ್ನು ಬರಮಾಡಿ ಮಾನವರನ್ನು ನಾಶಗೊಳಿಸುವ ಮೂಲಕ ಅದಕ್ಕೆ ಅಂತ್ಯವನ್ನು ತರಲು ನಿರ್ಧರಿಸಿದನು (ಅಧ್ಯಾಯಗಳು 6-8).

## ದೇವರ ನ್ಯಾಯತೀರ್ಪು ಮತ್ತು ಆತನ ಲೋಕದ ನವೀಕರಣ (ಅಧ್ಯಾಯಗಳು 9-11)

ದೇವರ ಕೃಪೆಯಿಂದಾಗಿ, ನೋಹನು ಮತ್ತು ಆತನ ಕುಟುಂಬವು ಪ್ರಳಯದಿಂದ ತಪ್ಪಿಸಿಕೊಂಡು ಬದುಕುಳಿದರು. ಆ ಕಾಲದಿಂದ ಮೊದಲ್ಗೊಂಡು ಎಲ್ಲಾ ಮನುಷ್ಯರು ಅವರ ಸಂತಾನದವರಾಗಿರುವರು. ಈ ವಾಸ್ತವಾಂಶದ ಬೆಳಕಿನಲ್ಲಿ, ಜನರು ವರ್ಣಭೇದವನ್ನು ಮಾಡುವದಕ್ಕೆ ಯಾವದೇ ಬೈಬಲಾಧಾರವನ್ನು ಹೊಂದಿರುವದಿಲ್ಲ ಯಾಕೆಂದರೆ ಸ್ವಾಭಾವಿಕವಾಗಿ ಯಾವ ಜನಾಂಗವೂ ಬೇರೆ ಇನ್ನಾವದೇ ಜನಾಂಗಕ್ಕಿಂತ ಕೀಳಾದದ್ದಾಗಿರುವದಿಲ್ಲ. ಅಷ್ಟೇ ಅಲ್ಲದೆ, ಪ್ರಳಯಪೂರ್ವ ಕಾಲದಲ್ಲಿದ್ದ ಸಕಲ ಕೆಟ್ಟತನ ಮತ್ತು ಹಿಂಸಾಚಾರಗಳನ್ನು ತೊಲಗಿಸಿ ಶುದ್ಧ ಮಾಡಲ್ಪಟ್ಟ ಒಂದು ಲೋಕದಲ್ಲಿ ಕರ್ತನು ಮನುಷ್ಯನಿಗೆ ಒಂದು ಹೊಸ ಆರಂಭವನ್ನು ಒದಗಿಸಿದನು. ದೇವರು ಮೂಲವಾಗಿ ಸೃಷ್ಟಿಸಲ್ಪಟ್ಟ ಕ್ರಮವನ್ನು ಮರುದೃಢೀಕರಿಸಿದನು: ವರ್ಷದ ನಿಯತಕ್ರಮವಾದ ಕಾಲಗಳು ಮುಂದುವರೆಯುವವು, ಮಾತ್ರವಲ್ಲದೆ ಹಗಲು ಮತ್ತು ರಾತ್ರಿಗಳು ಇರುವವು. ಅದರ ಜೊತೆಗೆ, ದೇವರು ನೋಹ ಮತ್ತು ಆತನ ಪುತ್ರರನ್ನು ಮೂಲ ಸೃಷ್ಟಿಯ ಆಶೀರ್ವಾದದೊಂದಿಗೆ ಆಶೀರ್ವದಿಸಿದನು: “ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ” (9:1; ನೋಡಿರಿ 1:28), ಮತ್ತು ಇಡೀ ಲೋಕವನ್ನು ನಾಶಗೊಳಿಸುವಂತಹ ಪ್ರಳಯವನ್ನು ಇನ್ನೆಂದಿಗೂ ಬರಮಾಡುವದಿಲ್ಲ ಎಂದು ವಾಗ್ದಾನ ಮಾಡಿದನು.

ಪ್ರಳಯವು ಹಳೆಯ ಜಗತ್ತನ್ನು ಮತ್ತು ಅದರಲ್ಲಿ ತುಂಬಿದ್ದ ಪಾಪಿಗಳನ್ನು ನಾಶಗೊಳಿಸಿತ್ತಾದರೂ, ಬದುಕುಳಿದವರು ಪಾಪದ ಕೆಳಮುಖವಾದ ದಾರಿಯಲ್ಲಿ ಮುಂದುವರೆದಿದ್ದರು. ನೋಹನು ಒಂದು ದ್ರಾಕ್ಷೇತೋಟವನ್ನು ನೆಟ್ಟನು, ಬಹಳಷ್ಟು ದ್ರಾಕ್ಷಾರಸವನ್ನು ಕುಡಿದು ಮತ್ತನಾದುನ, ಮತ್ತು ಗುಡಾರದೊಳಗೆ ಬೆತ್ತಲೆಯಾಗಿ ಮಲಗಿದ್ದನು. ಹಾಮನು ಅನಂತರದಲ್ಲಿ ಆತನ ಬೆತ್ತಲೆತನವನ್ನು ಅವನ ಸಹೋದರರಿಗೆ ತೋರಿಸಿ ಕೊಟ್ಟನು (ಬಹುಶಃ ಅಪಹಾಸ್ಯ ಮಾಡುವ ರೀತಿಯಲ್ಲಿ), ಆತನ ತಂದೆಯ ಕಡೆಗೆ ಅಗೌರವವನ್ನು ತೋರಿಸಿದನು ಮತ್ತು ಆತನ ಮಗನಾದ ಕಾನಾನನ ಮೂಲಕವಾಗಿ ಅವನ ಸಂತತಿಯವರ ಮೇಲೆ ಶಾಪವನ್ನು ಬರಮಾಡಿಕೊಂಡನು. ಬಾಬೆಲಿನ ಜನರು ತಮಗೋಸ್ಕರ ಹೆಸರನ್ನು ಸ್ಥಾಪಿಸಿಕೊಳ್ಳಬೇಕೆಂದು ಪ್ರಯತ್ನಿಸುವದರಲ್ಲಿ ಅಹಂಕಾರಿಗಳಾಗಿದ್ದರು (ಮತ್ತು ಬಹುಶಃ ವಿಗ್ರಹಾರಾಧಕರಾಗಿದ್ದರು). ಅವರು ಆಕಾಶವನ್ನು ಮುಟ್ಟುವಷ್ಟು ಎತ್ತರಕ್ಕೆ ಒಂದು ಗೋಪುರವನ್ನು ನಿರ್ಮಿಸಿದರು. ದೇವರು ಬಾಬೆಲಿನ ಜನರ ಕೆಲಸವನ್ನು ನಿರ್ನಾಮಗೊಳಿಸಿದನು, ಅವರ ಭಾಷೆಗಳನ್ನು ತಾರುಮಾರುಗೊಳಿಸಿ ಭೂಮಿಯ ಮೇಲೆಲ್ಲಾ ಅವರನ್ನು ಚದುರಿಸಿ ಬಿಟ್ಟನು. ದೇವರಂತಾಗಬೇಕೆಂಬ ಮನುಷ್ಯನ ಪ್ರಯತ್ನಗಳೆಲ್ಲಾ - ಸ್ವತಂತ್ರ, ಸ್ವಯಂ-ಆಡಳಿತ, ಮತ್ತು ಸ್ವಾರ್ಥ-ಸಾಧಕತನ - ಇನ್ನಷ್ಟು ಪಾಪದೊಳಗೆ, ಕಲಹ, ಹತಾಶೆಗಳೊಳಗೆ ನಡಿಸಿದ್ದವಷ್ಟೆ, ಮತ್ತು ದೇವರಿಂದ ಹಾಗೂ ಇತರ ಮಾನವ ಜೀವಿಗಳಿಂದ ಅಗಲಿಕೆಯನ್ನುಂಟು ಮಾಡಿದ್ದವು.

## ದೇವರು ಒಂದು ನಂಬಿಕೆಯ ನಡೆಗಾಗಿ ಕರೆ ನೀಡಿದ್ದು (ಅಧ್ಯಾಯಗಳು 12-22)

ಒಂದು ಅರ್ಥಗರ್ಭಿತ ಜೀವನ ಹಾಗೂ ಒಂದು ಉದ್ದೇಶಭರಿತ ಗಮ್ಯತೆಗಾಗಿ ಮನುಷ್ಯನಿಗಿರುವ ಏಕೈಕ ನಿರೀಕ್ಷೆಯು ದೇವರೊಂದಿಗೆ ಒಂದು ವೈಯಕ್ತಿಕ ಸಂಬಂಧವನ್ನಿಟ್ಟುಕೊಳ್ಳುವದೇ ಆಗಿದೆ, ಅದು ನಂಬಿಕೆಯ ಮೂಲಕವಾಗಿ ಆರಂಭವಾಗತಕ್ಕದ್ದು. ದೇವರು ಪ್ರಥಮ ಹೆಜ್ಜೆಯನ್ನಿಟ್ಟು ಅಬ್ರಹಾಮನನ್ನು - ಆತನು ತನ್ನ ಕುಟುಂಬದವರ

ಸಮೇತವಾಗಿ ವಿಗ್ರಹಾರಾಧಕನಾಗಿದ್ದನು (ಯೆಹೋಶುವ 24:2) - ಒಂದು ನಂಬಿಕೆಯ ನಡೆಗಾಗಿ ಕರೆದನು. ವರ್ಷಗಳ ಗತಿಸಿದಂತೆ ಅಬ್ರಹಾಮನ ನಂಬಿಕೆಯು ತಡವರಿಸಿತ್ತು ಮತ್ತು ಬಲಗೊಳ್ಳುತ್ತಾ ಸಾಗಿತ್ತು, ಮತ್ತು ತನ್ನ ಪರಿಪೂರ್ಣ ವಿಧೇಯತೆಯಿಂದಾಗಲಿ ಅಥವಾ ತನ್ನ ಸ್ವಂತ ಅರ್ಹತೆಯಿಂದಾಗಲಿ ದೇವರು ಅವನನ್ನು ಅಂಗೀಕರಿಸಿಕೊಂಡಿಲ್ಲ, ಆದರೆ ಕೃಪೆಯ ಮುಖಾಂತರ ನಂಬಿಕೆಯಿಂದಲೇ ದೇವರು ಅವನನ್ನು ನೀತಿವಂತನೆಂದು ಎಣಿಸಿದನೆಂಬುದನ್ನು ಅಬ್ರಹಾಮನು ತಿಳಿದುಕೊಂಡನು (15:6).

ದೇವರು ಅಬ್ರಹಾಮನನ್ನು ಕೇವಲ ಆತನೊಬ್ಬನಿಗೋಸ್ಕರ ರಕ್ಷಣೆ ಮಾಡಲಿಲ್ಲ, ಆದರೆ ಆತನ ಮೂಲಕವಾಗಿ ಆಶೀರ್ವಾದಗಳನ್ನು ಒಂದು ದೊಡ್ಡ ಜನಾಂಗಕ್ಕೆ, ಹಲವಾರು ಜನರಿಗೆ, ಮತ್ತು ಅಂತಿಮವಾಗಿ ಭೂಲೋಕದ ಸಕಲ ಜನಾಂಗಗಳಿಗೆ ಹರಿಯುವಂತೆ ಮಾಡುವ ಒಂದು ಕಾಲುವೆಯಾಗಿ ಆರಿಸಿಕೊಂಡನು. ಹಾಗಾದರೆ, ರಕ್ಷಣೆಯು ಪ್ರಾಥಮಿಕವಾಗಿ ಕೇವಲ ಅಬ್ರಹಾಮನ ಕುರಿತಾಗಿಯೇ ಆಗಿರುವದಿಲ್ಲ. ಬದಲಾಗಿ, ಅದು ಕರ್ತನು ತನ್ನ ಕೃಪೆಯ ಮೂಲಕವಾಗಿ ಈ ಒಬ್ಬ ವ್ಯಕ್ತಿಗೆ ಮಾತ್ರವೇ ಅಲ್ಲ, ಆದರೆ ಆತನ ಮೂಲಕವಾಗಿ ಇಡೀ ಲೋಕಕ್ಕಾಗಿ ಏನು ಮಾಡಬಲ್ಲನು ಎಂಬುದರ ಕುರಿತಾಗಿರುತ್ತದೆ. ಅವನ ಮನೆಯನ್ನು ಮತ್ತು ಕುಟುಂಬವನ್ನು ತೊರೆದು ಬಿಟ್ಟು ತಾನು ಹಿಂದೆಂದೂ ನೋಡಿರದ ದೇಶವೊಂದಕ್ಕೆ ಹೋಗುವಂತೆ ಅಬ್ರಹಾಮನು ದೇವರಿಂದ ಕರೆಯಲ್ಪಟ್ಟಾಗ, ಆತನು ಒಂದು ನಂಬಿಕೆಯ ನಡೆಯನ್ನು ಆರಂಭಿಸಿದನು, ಅದು ಆತನ ಜೀವಿತದುದ್ದಕ್ಕೂ ಮುಂದುವರೆದಿತ್ತು (ಇಬ್ರಿಯ 11:8). ನಂಬಿಗಸ್ತರಿಗೆ ತಂದೆಯಾಗಿರುವ ಈತನ ಜೀವನದ ಸಮೀಕ್ಷೆಯೊಂದನ್ನು ಮಾಡುವಾಗ ಅದು ತೋರಿಸಿ ಕೊಡುವದೇನೆಂದರೆ ಒಬ್ಬ ವ್ಯಕ್ತಿ ನಂಬಿಕೆಯ ಸರ್ವೋಚ್ಛ ನ್ಯಾಯಸಮ್ಮತೆಯ ಪರೀಕ್ಷೆಯು ದೇವರು ತನಗಾಗಿ ಏನು ಮಾಡುವನೆಂಬುದಾಗಿ ಮನುಷ್ಯನು ನಂಬುತ್ತಾನೆ ಎಂಬುದಾಗಿರುವದಿಲ್ಲ. ಬದಲಾಗಿ, ಆತನು ದೇವರಿಗಾಗಿ ಏನು ಮಾಡುವದಕ್ಕೆ ಮತ್ತು ಆತನಿಗೆ ಕೊಡುವದಕ್ಕೆ ಮನಸ್ಸುಳ್ಳನಾಗಿದ್ದಾನೆ ಎಂಬುದೇ ಆಗಿರುತ್ತದೆ. ಅಬ್ರಹಾಮನ ಪ್ರಕರಣದಲ್ಲಿ, ಅದು ಆತನ ವಾಗ್ದಾನದ ಮಗುವಾಗಿತ್ತು (ಅಧ್ಯಾಯ 22).

## ಅಬ್ರಹಾಮನ ನಂಬಿಕೆಯ ಫಲಿತ (ಅಧ್ಯಾಯಗಳು 23; 24)

ಅಬ್ರಹಾಮನು ಸಾರಳನ್ನು ಸಮಾಧಿ ಮಾಡಿದ ವೇಳೆ, ಆತನು ಕಾನಾನ್ಯರ ಮಧ್ಯದಲ್ಲಿ ಅರವತ್ತಕ್ಕೂ ಅಧಿಕ ವರ್ಷಗಳ ಕಾಲ ಜೀವಿಸಿದ್ದನು.[16] ದೇವರು ಆತನನ್ನು ಆಶೀರ್ವದಿಸಿದ್ದಾನೆ, ಆತನನ್ನು ಒಬ್ಬ "ಮಹಾಪ್ರಭು"ವಿನಂತೆ (ಅಕ್ಷರಶಃ ಒಬ್ಬ "ದೇವರ ಪ್ರಭು"; 23:6) ಶ್ರೀಮಂತನನ್ನಾಗಿ ಮತ್ತು ಶಕ್ತಿಶಾಲಿಯಾಗಿ ಮಾಡಿದ್ದಾನೆ ಎಂಬುದನ್ನು ಅವರು ಗ್ರಹಿಸಿಕೊಂಡಿದ್ದರು. ಬಹುಪಾಲು ಕಾಲದ ವರೆಗೂ, ಅಬ್ರಹಾಮನು ಕಾನಾನ್ ದೇಶದ ನಿವಾಸಿಗಳ ಮುಂದೆ ನೀತಿಯುಳ್ಳ ಜೀವಿತವನ್ನು ಜೀವಿಸುವದು ಮೂಲಕವಾಗಿ ತನ್ನ ಬೆಳಕನ್ನು ಪ್ರಕಾಶಗೊಳಿಸಿದ್ದನು (ಮತ್ತಾಯ 5:16). ಅದರ ಜೊತೆಯಲ್ಲಿ, ಬಹುಶಃ ಆತನು ಆ ದೇಶದಲ್ಲಿಯೇ ಅತ್ಯಂಥ ದೊಡ್ಡ ಖಾಸಗಿ ಸೈನ್ಯವನ್ನಿಟ್ಟುಕೊಂಡಿರಬಹುದಾಗಿದೆ,[17] ಅದರಿಂದಾಗಿ ಇತರರು ಆತನಿಗೆ ಭಯ ಮತ್ತು ಗೌರವ ಎರಡನ್ನೂ ತೋರಿಸುವಂತಾಗಿರಬಹುದಾಗಿದೆ.

ಇಸಾಕನು ಮದುವೆ ಮಾಡಿಕೊಳ್ಳುವ ಸಮಯ ಬಂದಾಗ, ಅಬ್ರಹಾಮನು ಹೆಂಡತಿಯೊಬ್ಬಳನ್ನು ಹುಡುಕಿಕೊಂಡು ಬರುವಂತೆ ತನ್ನ ನಂಬಿಗಸ್ತ ಸೇವಕನನ್ನು ಮೆಸಪೊತಾಮ್ಯದಲ್ಲಿದ್ದ ತನ್ನ ಸಂಬಂಧಿಕರ ಬಳಿಗೆ ಕಳುಹಿಸಿದನು. ಹೊರಡುವದಕ್ಕೆ ಮುಂಚೆ, ಸೇವಕನು ಆಲೋಚಿಸಿಕೊಂಡಿದ್ದೇನೆಂದರೆ ಆ ಸ್ತ್ರೀಯು ಅವನೊಂದಿಗೆ ಕಾನಾನಿಗೆ ಬರಲು

ಬಯಸದಿರಬಹುದು ಎಂಬುದೆ. ಹಾಗೇನಾದರೂ ಸಂಭವಿಸಿದ್ದಾದರೆ, ತಾನು ಇಸಾಕನನ್ನು ಮೆಸಪೋತಾಮ್ಯಕ್ಕೆ ಕರೆದೊಯ್ಯಬಹುದೋ ಎಂದು ಅಬ್ರಹಾಮನನ್ನು ಕೇಳಿದನು. ಇಸಾಕನನ್ನು ಅಲ್ಲಿಗೆ ಕರೆದೊಯ್ಯಕೂಡದೆಂದು ಸೇವಕನಿಗೆ ಕಟ್ಟುನಿಟ್ಟಿನಿಂದ ಹೇಳಲಾಯಿತು. ಮಗನು ಅಲ್ಲಿಗೆ ಹೊರಡು ಹೋಗಿ ಪುನಃ ಕಾನಾನಿಗೆ ಹಿಂದಿರುಗದೆಯೇ ಇದ್ದು ಬಿಟ್ಟರೆ ದೇವರ ವಾಗ್ದಾನವು ಸಂಕಷ್ಟಕ್ಕೀಡಾಗಬಹುದೆಂಬುದನ್ನು ಅಬ್ರಹಾಮನು ಗ್ರಹಿಸಿಕೊಂಡನು. ಆತನು ಅರ್ಥಮಾಡಿಕೊಂಡಿದ್ದೇನೆಂದರೆ, ದೇವರು ಎಲ್ಲಿ ಜೀವಿಸಬೇಕೆಂದು ಅವರನ್ನು ಕರೆದಿದ್ದಾನೋ ಅಲ್ಲಿಂದ ದೇವಜನರು ಹಿಂದಿರುಗಿ ನೋಡಲೇ ಬಾರದೆಂಬುದೆ.

ಅಬ್ರಹಾಮನ ಸೇವಕನು ತನ್ನ ಯಜಮಾನನ ಮಗನಿಗೆ ಹಾರಾನಿನಲ್ಲಿರುವ ಯಾವ ಹುಡುಗಿಯು ಸೂಕ್ತವಾದವಳೆಂದು ತಿಳಿಸಿ ಕೊಡುವಂತೆ ಬೇಡಿಕೊಳ್ಳುವ ಮೂಲಕ ಪ್ರಾರ್ಥನೆಯ ಶಕ್ತಿಯಲ್ಲಿ ಮತ್ತು ದೈವಿಕ ಮಾರ್ಗದರ್ಶನದಲ್ಲಿ ನಂಬಿಕೆಯನ್ನು ತೋರ್ಪಡಿಸಿದನು. ದೇವರು ಆತನನ್ನು ಅಬ್ರಹಾಮನ ಸಹೋದರನಾದ ನಾಹೋರನ ಕುಟುಂಬಕ್ಕೆ ಸೇರಿದ ರೆಬೆಕ್ಕಳನ್ನು ಆಯ್ಕೆ ಮಾಡಿಕೊಳ್ಳುವಂತೆ ನಡಿಸಿದನು. ಆ ಬಳಿಕ ಸೇವಕನು ಆಕೆಯನ್ನು ಇಸಾಕನಿಗೆ ಹೆಂಡತಿಯಾಗಿರುವಂತೆ ಕಾನಾನಿಗೆ ಕರೆದುಕೊಂಡು ಬಂದನು (ಅಧ್ಯಾಯ 24).

ಇದೆಲ್ಲವೂ ಅಬ್ರಹಾಮನ ಗುಣಸ್ವಭಾವ ಮತ್ತು ಸಮರ್ಪಣೆಯ ವಿಷಯದವಾಗಿ ದೇವರು ಹೇಳಿದ ಮಾತನ್ನು ಸರಿಯೆಂದು ಸಾಭಿತುಗೊಳಿಸುತ್ತದೆ: "ಅವನು ತನ್ನ ಪುತ್ರಪೌತ್ರರಿಗೆ - ನೀವು ನ್ಯಾಯನೀತಿಗಳನ್ನು ನಡಿಸಿ ಯೆಹೋವನ ಮಾರ್ಗವನ್ನು ಅನುಸರಿಸಬೇಕೆಂದು ಬೋಧಿಸುವಂತೆ ಅವನನ್ನು ನಾನು ಆದುಕೊಂಡೆನಲ್ಲಾ; ಅವನು ಹೀಗೆ ಮಾಡುವದರಿಂದ ಯೆಹೋವನಾದ ನನ್ನ ವಾಗ್ದಾನವು ನೆರವೇರುವದು ಅಂದುಕೊಂಡನು" (18:19). ಅಬ್ರಹಾಮನ ನಂಬಿಕೆಯು ಎಷ್ಟೊಂದು ನಿಜತ್ವದಿಂದ ಕೂಡಿತ್ತೆಂದರೆ ಆತನು ಅದನ್ನು ತನ್ನ ಮಕ್ಕಳಿಗೆ ಕಲಿಸಿಕೊಟ್ಟದ್ದು ಮಾತ್ರವೇ ಅಲ್ಲ, ಆದರೆ "ಮನೆಯವರಿಗೂ," ಅಂದರೆ ಆತನ ದಾಸರಿಗೆ (ಗುಲಾಮರಿಗೆ) ಸಹ "ಯೆಹೋವನ ಮಾರ್ಗವನ್ನು ಅನುಸರಿಸಬೇಕೆಂದು" ಕಲಿಸಿ ಕೊಟ್ಟಿದ್ದನು.

## ಮಾನವ ವಿಧಿಯ ಕುರಿತು ದೇವರ ಪೂರ್ವಜ್ಞಾನ (ಅಧ್ಯಾಯಗಳು 25-28)

ಯಾಕೋಬ ಮತ್ತು ಏಸಾವರ ನಡುವಿನ ಹೋರಾಟವು ಅವರ ಜನನಕ್ಕಿಂತ ಮುಂಚೆಯೇ ಆರಂಭಗೊಂಡಿತ್ತು (25:22, 24-26), ಮತ್ತು ದೇವರು ಅದರ ಮಹತ್ವಪೂರ್ಣತೆಯನ್ನು ರೆಬೆಕ್ಕಳಿಗೆ ಪ್ರಕಟಿಸಿದನು: "ನಿನ್ನ ಗರ್ಭದಲ್ಲಿ ಎರಡು ಜನಾಂಗಗಳು ಅವೆ; ಆ ಎರಡು ಜನಾಂಗಗಳು ಜನ್ಮಾರಭ್ಯ ವಿರೋಧದಿಂದ ಭೇದವಾಗುವವು; ಅವುಗಳಲ್ಲಿ ಒಂದು ಮತ್ತೊಂದಕ್ಕಿಂತ ಬಲಿಷ್ಠವಾಗುವದು; ಹಿರಿಯದು ಕಿರಿಯದಕ್ಕೆ ಸೇವೆ ಮಾಡುವದು" (25:23). ಈ ವಾಕ್ಯಭಾಗವು ಅನೇಕ ಸಾರಿ ಅರ್ಥನಿರೂಪಣೆ ಮಾಡಲ್ಪಟ್ಟಿರುವ ವಿಧದ ಹೊರತಾಗಿಯೂ, ಅದಕ್ಕೂ ಯಾಕೋಬನ ಅಥವಾ ಏಸಾವನ ನಿತ್ಯವಾದ ಅಂತ್ಯಾವಸ್ಥೆಗೂ ಯಾವದೇ ಸಂಬಂಧವಿರುವದಿಲ್ಲ. ಪ್ರವಾದನೆಯು ಒಬ್ಬ ವ್ಯಕ್ತಿಪರನಾಗಿ ಆ ಮಗುವಿನ ಕುರಿತಾಗಿಯೂ ಆಗಿರಲಿಲ್ಲ ಯಾಕೆಂದರೆ ಏಸಾವನು ಎಂದಿಗೂ ಯಾಕೋಬನಿಗೆ ಸೇವೆ ಮಾಡಲಿಲ್ಲ; ಬದಲಾಗಿ, ಅವರ ಸಂತಾನದವರು ("ಎರಡು ಜನಾಂಗಗಳು") ವಿಮೋಚನಾತ್ಮಕ ಚರಿತ್ರೆಯಲ್ಲಿ ನಿರ್ವಹಿಸಲಿದ್ದ ಪಾತ್ರಗಳ ಕುರಿತ ಉಲ್ಲೇಖವಾಗಿತ್ತು. ಯಾಕೋಬನಿಂದ ಉತ್ಪತ್ತಿಯಾದ ಸಂತಾನದವರು ಇಸ್ರಾಯೇಲ್ಯರಾಗಿದ್ದರೆ, ಏಸಾವನಿಂದ ಬಂದವರು ಏದೋಮ್ಯರು ಆಗಿದ್ದರು. ಈ ಎರಡನೆಯವರು ದಾವೀದನ ಕಾಲದಲ್ಲಿ ಅಧೀನಪಡಿಸಿಕೊಳ್ಳಲ್ಪಟ್ಟರು ಮತ್ತು ಆತನ ಆಳ್ವಿಕೆಯಡಿಯಲ್ಲಿ ಸೇವೆ ಮಾಡುವಂತೆ ಒತ್ತಾಯಿಸಲ್ಪಟ್ಟರು (2 ಸಮುವೇಲ 8:14).

ಪ್ರತಿಯಾಗಿ, ಇತಿಹಾಸವು ಲೋಕದೊಳಗೆ ಕ್ರಿಸ್ತನು ಬರುವದರ ಕಡೆಗೆ ಸಾಗುತ್ತಲಿದ್ದ ಹಾಗೆ, ಇದು ಹಳೆಯ ಒಡಂಬಡಿಕೆಯುದ್ದಕ್ಕೂ "ಎರಡು ಜನಾಂಗಗಳ" ನಡುವೆ ಕಲಹವು ನಿರಂತರವಾಗಿ ನಡೆಯುವಂತೆ ನಡಿಸಿತ್ತು.

ಅವರು ಪ್ರವಾದನೆಯ ಪೂರ್ಣ ಅರ್ಥವನ್ನು ಅರ್ಥಮಾಡಿಕೊಂಡರೋ ಅಥವಾ ಇಲ್ಲವೋ, ಯಾಕೋಬ ಮತ್ತು ಏಸಾವರು ವ್ಯಕ್ತಿಪರರಾಗಿ ತಮ್ಮ ಜೀವಿತಗಳಿಗಾಗಿ ದೇವರ ಕೆಲಸಗಳಲ್ಲಿ ಮತ್ತು ಉದ್ದೇಶಗಳಲ್ಲಿ ದಾರಿಯನ್ನು ಕಂಡುಕೊಳ್ಳುವದಕ್ಕೆ ಹೋರಾಡುವವರಾಗಿದ್ದರು, ಅದನ್ನು ಕರ್ತನು ಅವರ ಜನ್ಮಕ್ಕೆ ಮುಂಚೆಯೇ ಎದುರುನೋಡಿದ್ದನು. ಹುಡುಗರು ಮತ್ತು ಅವರ ತಂದೆತಾಯಿಗಳಿಬ್ಬರೂ ದೇವರ ಚಿತ್ತವನ್ನು ಆಕ್ರಮಿಸಿಕೊಳ್ಳುವದಕ್ಕೆ ಅಥವಾ ಅದನ್ನು ವಿರೋಧಿಸುವದಕ್ಕೆ ಪ್ರಯತ್ನಿಸಿದರು, ಅದರಿಂದ ಅದರಲ್ಲಿ ಭಾಗಿಯಾದವರೆಲ್ಲರ ಕುಟುಂಬ ಸಂಬಂಧಗಳಲ್ಲಿ ಹೃದಯವೇದನೆ ಉಂಟಾಗಿತ್ತು. ಆದದರಿಂದ, ಯಾಕೋಬನ ಜೀವಿತದ ಬಹಳಷ್ಟು ಭಾಗವು ಸತ್ಯವಂತಿಕೆ ಮತ್ತು ದೇವರು ನಿಜಕ್ಕೂ ಆತನ ಸಂಗಡವಿರುವನೆಂದು ಹಾಗೂ ಆತನ ಗುಣಸ್ವಭಾವಗಳಲ್ಲಿ ದೋಷಗಳ ಹಾಗೂ ಆತನು ಎದುರಿಸಿದ್ದ ಸಕಲ ಕಷ್ಟಗಳು ಮತ್ತು ಅಪಾಯಗಳ ಹೊರತಾಗಿಯೂ ತನ್ನ ವಾಗ್ದಾನಗಳನ್ನು ದೇವರು ನೆರವೇರಿಸುವನೆಂದು ವಿಶ್ವಾಸಿಸುವದರ ವಿಷಯದಲ್ಲಿ ಒಂದು ಹೋರಾಟವನ್ನು ಒಳಗೊಂಡಿತ್ತು.

ಇನ್ನೊಂದು ಕಡೆಯಲ್ಲಿ, ಏಸಾವನು ತನ್ನ ಜೀವಿತದಲ್ಲಿ ದೇವರ ಮಾರ್ಗದರ್ಶನವನ್ನು ವಿರೋಧಿಸಿದನು. ಆತನು ಕಾನಾನ್ಯರ ಹೆಂಡತಿಯರನ್ನು ಮಾಡಿಕೊಂಡನು, ಅವರು ಆತನ ತಾಯಿ ಮತ್ತು ತಂದೆಗೆ ಕಡುವೇದನೆಯುಂಟಾಗುವದಕ್ಕೆ ಮೂಲಕಾರಣವಾಗಿದ್ದರು (26:34, 35; 27:46; 28:8). ಸ್ವಲ್ಪ ಕಾಲದ ವರೆಗೆ, ಮರಣದ ಹಾಸಿಗೆಯಲ್ಲಿನ ಆಶೀರ್ವಾದಗಳನ್ನು ತನ್ನಿಂದ ಕದ್ದುಕೊಂಡಿದ್ದಕ್ಕಾಗಿ ಆತನು ಯಾಕೋಬನ ಮೇಲೆ ಹಗೆತನವನ್ನು ಸಾಧಿಸುತ್ತಿದ್ದನು ಮತ್ತು ಆತನನ್ನು ಕೊಲ್ಲುವೆನೆಂಬ ಯೋಚನೆಯಿಂದ ತನ್ನನ್ನು ಸಾಂತ್ವನ ಪಡಿಸಿಕೊಂಡನು (27:41). ಏಸಾವನು ತನಗೆ ಬಂದ ಪರಿಸ್ಥಿತಿಗೋಸ್ಕರ ದೇವರನ್ನು ಹೊಣೆಗಾರನನ್ನಾಗಿ ಮಾಡಿರಬಹುದಾಗಿದೆ ಯಾಕೆಂದರೆ, ಶಾಸ್ತ್ರಗಳು ಪ್ರಕಟಗೊಳಿಸುವ ಪ್ರಕಾರವಾಗಿ, ಆತನು ಯಾವ ನಂಬಿಕೆಯೂ ಇಲ್ಲದಂತೆ ತನ್ನ ಜೀವಿತವನ್ನು ನಡಿಸಿದನು. ವಾಸ್ತವಿಕದಲ್ಲಿ, ಇಬ್ರಿಯರಿಗೆ ಪತ್ರಿಕೆಯ ಲೇಖಕನು ಆತನನ್ನು "ಜಾರನು" ಮತ್ತು "ಭಕ್ತಿಹೀನ" (ಧಾರ್ಮಿಕವಲ್ಲದ) ವ್ಯಕ್ತಿ ಎಂದು ಕರೆದನು (ಇಬ್ರಿಯ 12:16). ಇದೆಲ್ಲವೂ ಸಹ ಜೀವಿಸುವದಕ್ಕೆ ಇದಕ್ಕಿಂತ ಉತ್ತಮ ದಾರಿಯೊಂದಿದೆ ಎಂಬುದನ್ನು ಸೂಚಿಸುತ್ತದೆ: ದೇವರ ಚಿತ್ತವನ್ನು ಅಂಗೀಕರಿಸಿಕೊಳ್ಳುವ - ಅದು ತಿಳಿದುಬರುವಷ್ಟರ ಮಟ್ಟಿಗೆ - ಮತ್ತು ಅದಕ್ಕೆ ಪ್ರತಿಕ್ರಿಯಿಸುವ ದಾರಿಯೇ. ಏಸಾವನಂತೆ ಇರುವವರು, ದೇವರ ಚಿತ್ತದ ವಿರುದ್ಧ ಕಹಿಯಾದ ಹೋರಾಟ ನಡಿಸುವದರಲ್ಲಿ ತಮ್ಮ ಜೀವಿತಗಳನ್ನು ಕಳೆಯುವವರು ತಾವು ಅನುಭವಿಸುವ ಬಹಳಷ್ಟು ದುರವಸ್ಥೆ ಮತ್ತು ಹತಾಶೆಗಳಿಗೆ ತಮ್ಮನ್ನೇ ದೂಷಿಸಿಕೊಳ್ಳಬೇಕಾಗುತ್ತದೆ. ನಿತ್ಯನಾದ ಕುಂಬಾರನ ಕೈಗಳಲ್ಲಿ ತಮ್ಮನ್ನು ಒಪ್ಪಿಸಿಕೊಳ್ಳುವದರ ಬದಲಾಗಿ, ಅವರ ಜೀವಿತಗಳನ್ನು ಬಳಸಿಕೊಂಡು ಏನಾದರೂ ಪ್ರಯೋಜನಕರ ಹಾಗೂ ಸುಂದರವಾದದ್ದನ್ನು ಮಾಡಬೇಕೆಂಬ ದೇವರ ಯೋಜನೆಯನ್ನು ಅವರು ಹಾಳು ಮಾಡಿಕೊಳ್ಳುತ್ತಾರೆ (ನೋಡಿರಿ ಯೆರೆಮೀಯ 18:1-12; 2 ತಿಮೊಥೆ 2:20-22).

## ಬಹುಪತ್ನಿತ್ವದಿಂದಾಗುವ ನಕಾರಾತ್ಮಕ ಫಲಿತಗಳ ಒಂದು ಪ್ರಕಟನೆ (ಅಧ್ಯಾಯಗಳು 29; 30)

ದಾಂಪತ್ಯವನ್ನು ಏಕಪತ್ನಿತ್ವವಾಗಿ ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯ ನಡುವಿನ

ಸಂಬಂಧವಾಗಿರುವಂತೆ ಉಂಟು ಮಾಡುವದರಲ್ಲಿ ದೇವರ ಜ್ಞಾನವು ಯಾಕೋಬನ ಇಬ್ಬರು ಹೆಂಡತಿಯರ - ರಾಹೇಲ ಮತ್ತು ಲೇಯ - ಮಧ್ಯದಲ್ಲಿದ್ದ ಕಲಹ, ಹೊಟ್ಟೇಕಿಚ್ಚು, ಮತ್ತು ಉದ್ವೇಗಗಳಿಗೆ ತದ್ವಿರುದ್ಧವಾಗಿ ಭಿನ್ನತೆಯಿಂದ ಕಾಣಲ್ಪಡುತ್ತದೆ. ಇಬ್ಬರೂ ಸ್ತ್ರೀಯರು ತಮ್ಮ ಗಂಡನಿಗೆ ಯಾವಳು ನೆಚ್ಚಿನವಳಾಗುವಳೋ ಅವಳೇ ಬಹಳಷ್ಟು ಮಕ್ಕಳನ್ನು ಹಡೆಯುವಳೆಂದು ಭಾವಿಸಿಕೊಂಡಿದ್ದರು; ಆದ್ದರಿಂದ ಕಾಲವು ಗತಿಸಿದಂತೆ, ಇಬ್ಬರೂ ಸ್ತ್ರೀಯರು ಹೆಚ್ಚು ಮಕ್ಕಳು ತಮ್ಮ ಲೆಕ್ಕಕ್ಕೆ ಎಣಿಸಲ್ಪಡುವಂತಾಗಬೇಕೆಂದು ತಮ್ಮ ದಾಸಿಯರನ್ನು ಯಾಕೋಬನಿಗೆ ಕೊಟ್ಟರು. ಮೂಲಪಿತೃವಿನ ಹೆಂಡತಿಯರ ನಡುವಿನ ಈ ವೈರತ್ವವು ಆತನ ಮಕ್ಕಳ ಜೀವಿತಗಳಲ್ಲಿ ವಿನಾಶಕಾರಿಯಾದ ಪರಿಣಾಮಗಳನ್ನು ಬೀರಿತ್ತು ಮತ್ತು ಸ್ವತಃ ಯಾಕೋಬನಿಗೆ ಹಲವಾರು ವರ್ಷಗಳ ವರೆಗೆ ಹೃದಯವೇದನೆಯನ್ನು ಒದಗಿಸಿತ್ತು, ಆತನ ನೆಚ್ಚಿನ ಮಗನಾದ ಯೋಸೇಫನು ಮರಣಿಸಿದನೆಂಬ ಸುದ್ದಿಯನ್ನು ಕೇಳಿ ಆತನ ಹೃದಯವು ಒಡೆದು ಹೋಗಿತ್ತು.

## ದೇವರಿಗೆ ಮಾಡುವ ಪ್ರಾರ್ಥನೆಯಲ್ಲಿ ಪಟ್ಟು ಬಿಡದೆ ಇರುವದು
## (ಅಧ್ಯಾಯಗಳು 28; 32)

28:20-22ರಲ್ಲಿ ಯಾಕೋಬನ ಪ್ರಾರ್ಥನೆಯು ನಿಜವಾಗಿಯೂ ದೇವರ ಸಂಗಡ ಒಂದು "ಒಂದು ವೇಳೆ ... ಹಾಗಾದರೆ" ಎಂಬಂತಿರುತ್ತದೆ, ಆದರೆ ಮಾನವನು ದೇವರಿಗೆ ಮಾಡುವ ಕಾರ್ಯದ ನಿಮಿತ್ತವಾಗಿ ತನಗೆ ಇಂಥಿಂಥದನ್ನು ಮಾಡಲೇ ಬೇಕೆಂದು ದೇವರನ್ನು ಹೊಣೆಯಲ್ಲಿ ಸಿಕ್ಕಿಸುವ ಮೂಲಕವಾಗಿ ದೈವಿಕ ಆಶೀರ್ವಾದಗಳನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ. ಅಲ್ಲದೆ ಕರ್ತನ ದೂತನೊಂದಿಗಿನ ಮಲ್ಲಯುದ್ಧದಲ್ಲಿ ದೈಹಿಕ ಪರಾಕ್ರಮವನ್ನಾಗಲಿ ಅಥವಾ ಚಿತ್ತ ಶಕ್ತಿಯನ್ನು ತೋರ್ಪಡಿಸುವ ಮೂಲಕವಾಗಲಿ ಸಹ ಒಬ್ಬ ವ್ಯಕ್ತಿಯು ದೇವರ ಆಶೀರ್ವಾದಗಳನ್ನು ಹೊಂದಿಕೊಳ್ಳಲಾಗದು! ಯಾಕೋಬನು ಯಾವಾಗ ತಾನು ತನ್ನನ್ನಾಗಲಿ ಮತ್ತು ಆತನ ಕುಟುಂಬವನ್ನಾಗಲಿ ತನ್ನ ಕಡೆಗೆ ದೌಡಾಯಿಸುತ್ತಿದ್ದ ಏಸಾವನ ನಾನ್ನೂರು ಆಯುಧ ಹಿಡಿದಿದ್ದ ಮನುಷ್ಯರಿಂದ ಕಾಪಾಡಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಗ್ರಹಿಸಿಕೊಂಡಾಗಲೇ ನಿಜವಾದ ಬಿಡುಗಡೆಯನ್ನು ಅನುಭವಿಸಿದನು (ನೋಡಿರಿ 33:1). ಎಷ್ಟೇ ಕುತಂತ್ರ, ಸುಳ್ಳು, ಅಥವಾ ಸಂಚುಗಳನ್ನು ಮಾಡಿದ್ದರೂ ಯಾಕೋಬನಿಗೆ ಲಾಭವಾಗುತ್ತಿರಲಿಲ್ಲ. ದೇವರನ್ನು ಬಿಗಿಯಾಗಿ ಹಿಡಿದುಕೊಂಡು - ಆತನು 32:22-32ರಲ್ಲಿ ದೇವದೂತನನ್ನು (ದೇವರನ್ನು ಪ್ರತಿನಿಧಿಸಿದವನನ್ನು) ಹಿಡಿದುಕೊಳ್ಳಬೇಕಾಗಿ ಬಂದಿದ್ದ ಪ್ರಕಾರವೇ - ಆತನ ಆಶೀರ್ವಾದವನ್ನು ಬೇಡಿಕೊಳ್ಳುವದೊಂದೇ ಯಾಕೋಬನಿಗೆ ಇದ್ದ ದಾರಿಯಾಗಿತ್ತು.

ಆದದರಿಂದ, ನಂಬಿಕೆಯ ಮೂಲಕ ಪಟ್ಟು ಬಿಡದೆ ಬೇಡಿಕೊಳ್ಳುವದು ಪ್ರಾರ್ಥನೆಗೆ ಉತ್ತರ ಸಿಕ್ಕುವದಕ್ಕೆ ಬೀಗದ ಕೈಯಾಗಿದೆ; ಮತ್ತು ಇದಕ್ಕೆ ಕಾರಣವು ತನ್ನ ಪರವಾಗಿ ಕಾರ್ಯ ಮಾಡುವಂತೆ ದೇವರ ಮನವೊಲಿಸುವದಕ್ಕೆ ಮನುಷ್ಯನಿಗೆ ಸಾಕಷ್ಟು ಪ್ರಮಾಣದಲ್ಲಿ ಪರಿಶ್ರಮ ಹಾಕುವ ಅಗತ್ಯವಿದೆ ಎಂದಾಗಿರುವದಿಲ್ಲ. ಬದಲಾಗಿ, ಅದಕ್ಕೆ ಕಾರಣವು ಏನೆಂದರೆ ಪಟ್ಟು ಬಿಡದೆ ಪ್ರಾರ್ಥಿಸುವದೆಂದರೆ ಆಶೀರ್ವಾದ ನಿಜವಾದ ಮೂಲವು ದೇವರೇ ಎಂದು ಒಪ್ಪಿಕೊಳ್ಳುವದಾಗಿದೆ, ಮತ್ತು ಮನುಷ್ಯನು ಹೃದಯ ಮುರಿದವನಾಗಿ ಸಹಾಯವು ತನಗೆ ಬಹಳ ಅಗತ್ಯವಿದೆ ಎಂದು ಅರಿಕೆ ಮಾಡುವಾಗ, ಅದನ್ನು ಕೊಡುವ ಕರ್ತನ ಒಳ್ಳೇತನ ಹಾಗೂ ಕರುಣೆಗಳಲ್ಲಿ ಅದು ಭರವಸವನ್ನು ವ್ಯಕ್ತಪಡಿಸುವದಾಗಿದೆ.

## ದೇವರ ಅನುಗ್ರಹದ ಕೆಲಸ (ಅಧ್ಯಾಯಗಳು 37-50)

ಯೋಸೇಫನ ಕಥೆಯು ಜನರ ಹಾಗೂ ದೇಶಗಳ ಜೀವನಗಳಲ್ಲಿ ದೇವರು ತನ್ನ ಉದ್ದೇಶಗಳನ್ನು ನೆರವೇರಿಸುವದಕ್ಕಾಗಿ ಹೇಗೆ ತೆರೆಯ ಮರೆಯಲ್ಲಿ ಕೆಲಸ ಮಾಡುತ್ತಾನೆ, ಆದಾಗ್ಯೂ ಸ್ವೇಚ್ಛಾಚಿತ್ತವನ್ನು ಉಲ್ಲಂಘಿಸದೆಯೇ ಅದನ್ನು ಮಾಡುತ್ತಾನೆಂಬುದನ್ನು ತೋರಿಸಿ ಕೊಡುತ್ತದೆ. ಜನರು ಮೊದಲು ಒಂದು ವಿಧದಲ್ಲಿ ಮತ್ತು ಇನ್ನೊಮ್ಮೆ ಬೇರೊಂದು ವಿಧದಲ್ಲಿ ಮನಸ್ಸಿಗೆ ಬಂದಂತೆ ತಳ್ಳಾಡಲ್ಪಡುವವರಾಗಿ, ಅವರು ದೈವಿಕ ಚದುರಂಗದಾಟದಲ್ಲಿರುವ ಕೈಬೊಂಬೆಗಳಂತಲ್ಲ. ಅದಕ್ಕೆ ತದ್ವಿರುದ್ಧವಾಗಿ, ಜನರು ಮಾಡುವ ಒಳ್ಳೇ ಮತ್ತು ಕೆಟ್ಟ ಸಂಗತಿಗಳನ್ನು ತೆಗೆದುಕೊಂಡು ಅವುಗಳನ್ನು ತನ್ನ ಅಂತಿಮ ಉದ್ದೇಶಗಳಿಗೋಸ್ಕರ ಅನುಕೂಲವಾಗುವಂತೆ ಕಾರ್ಯ ಸಾಧಿಸುತ್ತಾನೆ (ರೋಮಾ 8:28). ಯೋಸೇಫನ ಪ್ರಕರಣದಲ್ಲಿ ನೋಡುವದಾದರೆ, ಅಬ್ರಹಾಮನ ಸಂತಾನದವನಾಗಿದ್ದ ಆತನ ವಿಷಯದಲ್ಲಿ ದೇವರ ಚಿತ್ತವು ಏನಾಗಿತ್ತೆಂದರೆ ಆತನು ಯಾಕೋಬನ ಕುಲಕ್ಕೆ, ಐಗುಪ್ತಕ್ಕೆ, ಮತ್ತು ಪ್ರಾಚೀನ ಮೆಡಿಟೆರ್ರೇನಿಯನ್ ಜಗತ್ತಿನಲ್ಲಿದ್ದ ಇತರ ಜನರಿಗಾಗಿ ಆಶೀರ್ವಾದವಾಗಬೇಕು ಎಂಬುದೆ.

ಯೋಸೇಫನ ಕಥನವು ಮನುಷ್ಯರ ದುರಹಂಕಾರದ, ಸ್ವಾರ್ಥ, ಹಾಗೂ ಕೆಟ್ಟ ಕೃತ್ಯಗಳನ್ನು - ಸಹೋದರನನ್ನು ಐಗುಪ್ತದ ದಾಸತ್ವಕ್ಕೆ ಮಾರಾಟ ಮಾಡುವಂತಹ - ದೇವರು ತನ್ನ ಯೋಜನೆಗಳನ್ನು ನೆರವೇರಿಸುವದಕ್ಕಾಗಿ ಬಳಸಿಕೊಳ್ಳಬಲ್ಲನು, ಕೆಲವು ಸಾರಿ ಅದು ದೀರ್ಘವಾದ ಹಾಗೂ ಕಠಿಣವಾದ ಪರಿಶೋಧನೆಯನ್ನೊಳಗೊಂಡಿದ್ದರೂ ಆತನು ಹಾಗೆ ಬಳಸಿಕೊಳ್ಳಬಲ್ಲನು ಎಂಬುದನ್ನು ಕಣ್ಣಿಗೆ ಕಟ್ಟಿದಂತೆ ಹಾಗೂ ಸ್ಪಷ್ಟವಾಗಿ ದೃಷ್ಟಾಂತಗೊಳಿಸುತ್ತದೆ. ಖಂಡಿತವಾಗಿಯೂ, ದೇವರು ನಿರಂತರವಾಗಿ ತನ್ನ ಚಿತ್ತವನ್ನು ಹುಡುಕುವಂಥವರನ್ನು ಉತ್ತಮವಾಗಿ ಬಳಸಬಲ್ಲನು; ಆದರೆ ಹಾಗಿದ್ದ ಮೇಲೂ, ಆತನ ಹಸ್ತವು ಅವರ ಜೀವಿತಗಳಲ್ಲಿ ಕಾಣಿಸದೆ ಇರಬಹುದಾಗಿದೆ. ಒಬ್ಬನು ಗತಕಾಲವನ್ನು ಪರಿಶೀಲನೆ ಮಾಡಿದಂತೆ ದೇವರ ಅನುಗ್ರಹಾತ್ಮಕ ಆರೈಕೆಯನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಬಹುದು (45:5–7; 50:20).

## ಭಕ್ತಿಯುಳ್ಳ ಗುಣಸ್ವಭಾವವನ್ನು ಆಕಾರಕ್ಕೆ ತರುವಲ್ಲಿ ನೈತಿಕ ಮೌಲ್ಯಗಳಿಗಿರುವ ಸ್ಥಾನ (ಅಧ್ಯಾಯ 39)

ಯೋಸೇಫನು ಐಗುಪ್ತದಲ್ಲಿ ಒಬ್ಬ ಗುಲಾಮನಾಗಿದ್ದನು, ಮತ್ತು ಪೋಟೀಫರನ ಹೆಂಡತಿಯು ಆತನನ್ನು ಸಂಗಮಕ್ಕೆ ಬರುವಂತೆ ಪ್ರಲೋಭನೆಗೊಳಿಸಲು ಸತತವಾಗಿ ಪ್ರಯತ್ನಗಳನ್ನು ಮಾಡಿದಳು, ಆತನು ನಿರಾಕರಿಸಿದ್ದಕ್ಕೆ ತಳಹದಿಗಳು ಎರಡು ವಿಧವಾಗಿದ್ದವು. ತತ್ಫರಿಣಾಮವಾಗಿ, ಆತನು ಹೇಳಿದ್ದೇನೆಂದರೆ, “ನಿನ್ನ ಗಂಡನು ನಿನ್ನನ್ನು ಹೊರತು ಪಡಿಸಿ ಸಕಲವನ್ನು ನನ್ನ ವಶದಲ್ಲಿ ಒಪ್ಪಿಸಿರುತ್ತಾನೆ; ಆದದರಿಂದ, ಆತನು ತನ್ನ ಯಾವದೇ ಸ್ವತ್ತುಗಳ ವಿಷಯದಲ್ಲಿ ಆತನು ಚಿಂತೆ ಮಾಡುವ ಅಗತ್ಯವಿಲ್ಲ.” ಸರಳವಾಗಿ ಹೇಳುವದಾದರೆ, “ಪೋಟೀಫರನು ನನ್ನಲ್ಲಿ ವಿಶ್ವಾಸವಿಟ್ಟಿದ್ದಾನೆ, ಮತ್ತು ಆತನ ಹೆಂಡತಿಯೊಂದಿಗೆ ಲೈಂಗಿಕವಾಗಿ ಸಾಂಗತ್ಯವನ್ನು ಹೊಂದುವದೆಂದರೆ ಆತನ ವಿಶ್ವಾಸಕ್ಕೆ ಒಂದು ಭಯಂಕರವಾದ ದ್ರೋಹವನ್ನು ಮಾಡಿದಂತಾಗುವದು.” ಅಲ್ಲದೆ ಬೇರೊಬ್ಬನ ಹೆಂಡತಿಯೊಂದಿಗೆ ವ್ಯಭಿಚಾರವನ್ನು ನಡಿಸುವದು ದೇವರ ವಿರುದ್ಧವಾದ ಒಂದು ಪಾಪವಾಗುವದು ಎಂದು ಸಹ ಹೇಳಿದನು.

ಯೋಸೇಫನು ಹೇಗೆ ಅಂತಹ ಬಲವಾದ ಸತ್ಯವಂತಿಕೆ ಮತ್ತು ನೈತಿಕ ಮೌಲ್ಯಗಳ ಪ್ರಜ್ಞೆಯನ್ನು ಬೆಳೆಸಿಕೊಂಡನೆಂಬುದು ಕೇವಲ ಊಹೆಯ ವಿಷಯವಾಗಿರುತ್ತದೆ. ಬಹುಶಃ, ಆತನ

ತಂದೆತಾಯಿಗಳಾದ ಯಾಕೋಬ ಮತ್ತು ರಾಹೇಲಳರು, ತಮ್ಮ ಸುಳ್ಳು ಹೇಳುವಿಕೆ ಹಾಗೂ ಮೋಸಗೊಳಿಸುವಿಕೆಗಳು ಅವರ ಮೇಲೆ ಹಾಗೂ ಹೆತ್ತವರ ಮೇಲೆ ಉಂಟು ಮಾಡಿದ ಹೃದಯವೇದನೆಗಳ ಮತ್ತು ಸಂಕಷ್ಟಗಳ ಕುರಿತಾಗಿ, ಮಾತ್ರವಲ್ಲದೆ ದೇವರು ತನ್ನ ಜನರಿಂದ ಲೈಂಗಿಕ ವಿಷಯಗಳಲ್ಲಿ ಬಯಸುವಂತ ನೈತಿಕ ನಡತೆಯ ಕುರಿತಾಗಿ ಆತನಿಗೆ ತಿಳಿಸಿ ಕೊಟ್ಟಿರಬಹುದಾಗಿದೆ. ವ್ಯಭಿಚಾರವು ಸುಲಭವಾಗಿ ತಾರ್ಕಿಕಗೊಳಿಸಲ್ಪಡಬಹುದಾದ ಕೇವಲ ಒಂದು ಸಾಮಾಜಿಕ ಅಚಾತುರ್ಯತೆ ಮಾತ್ರವೇ ಆಗಿರುವದಿಲ್ಲ; ಅದು ದೇವರ ಸ್ವಭಾವವನ್ನೇ ಉಲ್ಲಂಘನೆ ಮಾಡುವಂತಹ ಒಂದು ಗಂಭೀರ ಪಾಪವಾಗಿದೆ, ಆತನು ಅಂಥ ಕೃತ್ಯಗಳ ಬಗ್ಗೆ ಯಾವಾಗಲೂ ತಿಳಿದಿರುವವನಾಗಿರುತ್ತಾನೆ.

## ದೇವರ ಕ್ಷಮಾಪಣೆ ಮತ್ತು ಸಂಧಾನ (ಅಧ್ಯಾಯಗಳು 42-45)

ಮೇಲ್ನಡೆಯಲ್ಲಿ ನೋಡುವದಾದರೆ, ಯೋಸೇಫನು ತನ್ನ ಸಹೋದರರ ಸಂಗಡ ಕಠೋರವಾಗಿ ನಡೆದುಕೊಂಡದ್ದು ಮತ್ತು ಬೇಕೆಂದೇ ಘಟನೆಗಳನ್ನು ಸೃಷ್ಟಿಸಿದ್ದು ತಾನು ಐಗುಪ್ತದಲ್ಲಿ ಅನುಭವಿಸಿದ ಹೃದಯವೇದನೆ ಹಾಗೂ ಶ್ರಮೆಗೆ ಬದಲಾಗಿ ಸೇಡು ತೀರಿಸಿಕೊಳ್ಳುವ ಪ್ರಯತ್ನವೆಂಬಂತೆ ಕಾಣಿಸಬಹುದು. ಹೇಗೂ, ಅಷ್ಟೊಂದು ಕಾಲದ ಅಂತರದಲ್ಲಿ, ಅವರು ಈಗಲೂ ತಾನು ಹದಿಹರೆಯದ ದಿನಗಳಿಂದ ಜ್ಞಾಪಿಸಿಕೊಂಡ ಪ್ರಕಾರವೇ ಇರುವರೋ ಅಥವಾ ಬದಲಾವಣೆಗೊಂಡಿದ್ದಾರೋ ಎಂಬುದನ್ನು ತಿಳಿಯಲು ಬಹುಶಃ ಆತನು ನಡಿಸಿದ ಒಂದು ಪರೀಕ್ಷೆಯಾಗಿತ್ತು. ಅವರು ತಮ್ಮ ತಮ್ಮನಿಗೆ ಮಾಡಿದ್ದ ಕೃತ್ಯಕ್ಕಾಗಿ ವಿಷಾಧ ಹೊಂದಿರುತ್ತಾರೋ? ಸಂಧಾನವು ಸಾಧ್ಯವಿತ್ತೋ? ಅವರು ಪುನಃ ಒಂದು ಕುಟುಂಬವಾಗುವದಕ್ಕೆ ಸಾಧ್ಯವಿತ್ತೋ?

ಖಂಡಿತವಾಗಿಯೂ, ಅಣ್ಣಂದಿರು ನಿಜವಾಗಿಯೂ ಪಶ್ಚಾತ್ತಾಪ ಪಟ್ಟಿದ್ದಾದರೆ ಒಂದು ನಿಜವಾದ ಸಂಧಾನವು ಉಂಟಾಗಲಿತ್ತು. ಒಂದಕ್ಕಿಂತ ಅಧಿಕ ಸಾರಿ, ಆ ಸಹೋದರರು ಐಗುಪ್ತದಲ್ಲಿ ಅನುಭವಿಸಿದ ಕಷ್ಟಗಳಿಂದಾಗಿ ತಾವು ಯೋಸೇಫನ ಸಂಗಡ ನಡೆದುಕೊಂಡ ರೀತಿಗಾಗಿ ದೇವರು ಸರಿಯಾಗಿಯೇ ನಮ್ಮನ್ನು ದಂಡಿಸುತ್ತಿದ್ದಾನೆ ಎಂದು ನಂಬುವಂತೆ ದಾರಿಯಾಗಿತ್ತು. ಅಂತಿಮವಾಗಿ, ಯೋಸೇಫನು ತನ್ನ ಪರಿಚಯವನ್ನು ಅಣ್ಣಂದಿರಿಗೆ ತಿಳಿಯಪಡಿಸಿ ತಾನು ಅವರನ್ನು ಕ್ಷಮಿಸಿದ್ದಾನೆಂದು ಪುನಾರಾಶ್ವಾಸನೆಯನ್ನು ನೀಡಿದಾಗ, ಅದು ಕೇವಲ ತಾನು ಅವರ ಮೇಲಿಟ್ಟಿರುವ ಪ್ರೀತಿಯ ನಿಮಿತ್ತವಾಗಿ ಮಾತ್ರವೇ ಆಗಿರುವದಿಲ್ಲ, ಆದರೆ ಅವರ ಜೀವಿತಗಳಲ್ಲಿ ದೇವರ ಉದ್ದೇಶಗಳು ಕಾರ್ಯಸಾಧಿಸಲ್ಪಡುತ್ತಿವೆ ಎಂಬುದನ್ನು ಗ್ರಹಿಸಿಕೊಂಡಿದ್ದರ ನಿಮಿತ್ತವೇ ಎಂಬುದನ್ನು ಒತ್ತಿ ಹೇಳಿದನು.

## ನಿರೀಕ್ಷೆಯು ಭವಿಷ್ಯತ್ತಿಗೆ ಒಂದು ಬೀಗದ ಕೈಯಂತೆ ಇರುವದು (ಅಧ್ಯಾಯಗಳು 49; 50)

ಯಾಕೋಬನು ತನ್ನ ಪುತ್ರರ ಮೇಲೆ ಉಚ್ಚರಿಸಿದ ಆಶೀರ್ವಾದಗಳು ಮೊದಲು ವ್ಯಕ್ತಿಗಳಾಗಿ ಅವರಿಗೆ ಸೇರಿದ್ದವು; ಆದರೆ ಒಂದು ಬೃಹತ್ ಅರ್ಥದಲ್ಲಿ, ಆತನ ಮಾತುಗಳು ಈ ಮನುಷ್ಯರನ್ನು ದಾಟಿ ಅವರ ಸಂತಾನದವರ ಕಡೆಗೆ ಬೆರಳು ಮಾಡಿದ್ದವು: ಕಾನಾನ್ ದೇಶದಲ್ಲಿ ಇಸ್ರಾಯೇಲನ ಹನ್ನೆರಡು ಗೋತ್ರಗಳು. ಅಬ್ರಹಾಮನಿಗೆ ಮಾಡಿದ ವಾಗ್ದಾನಗಳನ್ನು ಹೊತ್ತುಕೊಂಡವರಾಗಿ, ಅವರು ಅವರಿಗೆ, ಅವರ ಮಕ್ಕಳಿಗೆ, ಮತ್ತು ಇಡೀ ಲೋಕಕ್ಕೆ ದೇವರು ನೀಡಿರುವ ಪರಿಶುದ್ಧ ಕರೆಯನ್ನು ಅವರು ಎಂದಿಗೂ ಮರೆಯಕೂಡದಿತ್ತು (12:1–3).

ಪ್ರತಿಯೊಂದು ಸಂತತಿಯು ತನ್ನ ಮಕ್ಕಳಿಗೆ ತಾವು ಯಾರೆಂಬುದನ್ನು, ತಾವು ಯಾರಿಗೆ ಸೇರಿದವರೆಂಬುದನ್ನು, ಮತ್ತು ಅವರು ಏಕೆ ಇರುತ್ತಾರೆ (ಯಾವ ಉದ್ದೇಶಕ್ಕಾಗಿ) ಎಂಬುದನ್ನು ಕಲಿಸಿ ಕೊಡಬೇಕಾಗಿತ್ತು. ಯಾರು ಕಾಪಾಡಿಕೊಳ್ಳುವದಕ್ಕೆ ವಾಗ್ದಾನಗಳನ್ನು ಮತ್ತು ಜವಾಬ್ದಾರಿಗಳನ್ನು ಹೊಂದಿದ್ದು ಅವುಗಳನ್ನು ಎಂದಿಗೂ ಅಸಡ್ಡೆ ಮಾಡುವದಿಲ್ಲವೋ ಅವರಿಗೆ ಭವಿಷ್ಯತ್ತು ಸೇರಿರುತ್ತದೆ.

ಈಗಾಗಲೇ, ಯಾಕೋಬನ ಆಶೀರ್ವಾದಗಳಲ್ಲಿ, ಇಸ್ರಾಯೇಲ್ಯರ ಭವಿಷ್ಯದ ನಿರೀಕ್ಷೆಗಳು ಯಾವಾತನಿಗೆ ಜನರು (ಅನ್ಯಜನರು) ವಿಧೇಯರಾಗುವರೋ ಆ ಯೆಹೂದ ಗೋತ್ರಕ್ಕೆ ಸೇರಿದ ಒಬ್ಬ ಪ್ರಭುವಿನ ಮೇಲೆ ಮಾತ್ರವೇ ಇರಲಿತ್ತೆಂಬುದು ಸ್ಪಷ್ಟವಾಗಿತ್ತು (49:10). ಯೋಸೇಫನು ತನ್ನ ಸಹೋದರರಿಗೆ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನಗಳ ಕುರಿತು ಜ್ಞಾಪಕ ಮಾಡುವಿಕೆ ಮತ್ತು ಐಗುಪ್ತವು ಅವರ ಶಾಶ್ವತ ನಿವಾಸವಲ್ಲವಾದ್ದರಿಂದ ತನ್ನ ಮೂಳೆಗಳನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗುವಂತೆ ಸಹೋದರರಿಗೆ ಆದೇಶ ಕೊಡುವಿಕೆಯೊಂದಿಗೆ ಪುಸ್ತಕವು ಅಂತ್ಯಗೊಳ್ಳುತ್ತದೆ. ಅವರು ವಾಗ್ದಾನದ ದೇಶದಲ್ಲಿ ನೆರವೇರಿಸಬೇಕಾಗಿರುವ ಒಂದು ವಿಧಿಯನ್ನು ಹೊಂದಿದ್ದ ಜನರಾಗಿದ್ದರು (50:24, 25).

## ಸ್ಥೂಲವಿವರಣೆ

ಒಂದು ಅನುಸರಣೆಯು ಪುಸ್ತಕದ ಎರಡು ಪ್ರಮುಖ ವಿಭಜನೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಮೊದಲನೆಯ ವಿಭಜನೆಯು ಆದಿಯುಗದ ಚರಿತ್ರೆಯ ಮುಖ್ಯಾಂಶಗಳನ್ನು ತಿಳಿಸಿದರೆ, ಎರಡನೆಯ ವಿಭಜನೆಯು ಪೂರ್ವಜರ ಕಥನಗಳಿಂದ ಸಂಘಟಿತಗೊಂಡಿದೆ: ಅಬ್ರಹಾಮ, ಇಸಾಕ, ಯಾಕೋಬ, ಮತ್ತು ಯೋಸೇಫ.

ವಿಭಜನೆ 1

I. ಲೋಕದ ಆದಿಯುಗದ ಚರಿತ್ರೆ (1:1–11:32)
   A. ಸೃಷ್ಟಿಕಾರ್ಯದ ಆರಂಭ ಮತ್ತು ಸಮಾಪ್ತಿ (1:1–2:3)
   B. ತೋಟದಲ್ಲಿ ಪುರುಷನು ಮತ್ತು ಸ್ತ್ರೀಯ ಸೃಷ್ಟಿ (2:4–25)
   C. ಮನುಷ್ಯನ ಬೀಳುವಿಕೆ (3:1–24)
   D. ತೋಟದ ಹೊರಗೆ ಆದಾಮ ಮತ್ತು ಹವ್ವಳ ಕುಟುಂಬ (4:1–16)
   E. ಎರಡು ವಂಶಾವಳಿಗಳು (4:17–26)
   F. ಪ್ರಳಯಪೂರ್ವದ ಪೂರ್ವಜರು (5:1–32)
   G. ಮಹಾ ಪ್ರಳಯ: ವಿನಾಶ ಮತ್ತು ಸಂರಕ್ಷಣೆ (6:1–22)
   H. ಪ್ರಳಯದ ಆಗಮನ (7:1–24)
   I. ಮಾನವರಿಗಾಗಿ ಹೊಸ ಆರಂಭ (8:1–22)
   J. ಹೊಸ ಜಗತ್ತಿಗಾಗಿ ದೇವರ ಶಾಸನಗಳು ಮತ್ತು ಒಡಂಬಡಿಕೆ (9:1–29)
   K. ನೋಹನ ಸಂತಾನದವರು (10:1–32)
   L. ಜನಾಂಗಗಳ ಹಬ್ಬುವಿಕೆ: ಭಾಷೆಗಳ ತಾರುಮಾರು ಮತ್ತು ವಂಶಾವಳಿಗಳು (11:1–32)

ವಿಭಜನೆ 2

II. ಅಬ್ರಹಾಮನ ಕಥಾನಿರೂಪಣೆ (12:1-25:18)

A. ಅಬ್ರಹಾಮನು ಒಂದು ಹೊಸ ದೇಶಕ್ಕೆ ಕರೆಯಲ್ಪಟ್ಟಿದ್ದು: ಕಾನಾನ್ (12:1-20)
B. ಅಬ್ರಹಾಮ ಮತ್ತು ಲೋಟರು ಬೇರ್ಪಟ್ಟದ್ದು ಮತ್ತು ವಾಗ್ದಾನಗಳ ನವೀಕರಣ (13:1-18)
C. ಅಬ್ರಹಾಮನು ಯುದ್ಧದಲ್ಲಿ ಭಾಗಿಯಾಗಿದ್ದು ಮತ್ತು ಇಬ್ಬರು ಅರಸರನ್ನು ಭೇಟಿಯಾದದ್ದು (14:1-24)
D. ಅಬ್ರಹಾಮನ ಸಂಗಡ ದೇವರ ಭೂಮಿಯ ಒಡಂಬಡಿಕೆ ಮಾಡಿಕೊಂಡಿದ್ದು (15:1-21)
E. ಹಾಗರಳು ಮತ್ತು ಇಸ್ಮಾಯೇಲನ ಕಥೆ (16:1-16)
F. ಅಬ್ರಹಾಮನ ಸಂಗಡ ದೇವರ ಜನಾಂಗದ ಒಡಂಬಡಿಕೆ (17:1-27)
G. ದೇವರು ಅಬ್ರಹಾಮನಿಗೆ ಭೇಟಿ ಕೊಟ್ಟಿದ್ದು (18:1-33)
H. ಸೊದೋಮ ಮತ್ತು ಗೊಮೋರಗಳ ನಾಶನ (19:1-38)
I. ಗೆರಾರನಲ್ಲಿ ಅಬ್ರಹಾಮ ಮತ್ತು ಸಾರಳು: ದೇವರ ವಾಗ್ದಾನಗಳ ಸಂರಕ್ಷಣೆ (20:1-18)
J. ಇಸಾಕನ ಜನನ (21:1-7)
K. ಇಸಾಕ ಮತ್ತು ಇಸ್ಮಾಯೇಲ ನಡುವಿನ ಘರ್ಷಣೆ (21:8-21)
L. ಅಬೀಮೆಲೆಕನ ಸಂಗಡ ಅಬ್ರಹಾಮನು ಒಪ್ಪಂದ ಮಾಡಿಕೊಂಡಿದ್ದು (21:22-34)
M. ಅಬ್ರಹಾಮನ ನಂಬಿಕೆಯ ಪರೀಕ್ಷೆ: ಆತನ ಮಗನಾದ ಇಸಾಕನನ್ನು ಯಜ್ಞ ಮಾಡುವಂತೆ ಕರೆ ನೀಡಿದ್ದು (22:1-24)
N. ಸಾರಳ ಮರಣ (23:1-20)
O. ದೇವರ ಅನುಗ್ರಹಿಸುವಿಕೆಯು ತೋರ್ಪಡಿಸಲ್ಪಟ್ಟಿದ್ದು: ಇಸಾಕನಿಗಾಗಿ ಒಬ್ಬ ಹೆಂಡತಿ (24:1-67)
P. ಅಬ್ರಹಾಮನ ಕಡೇ ದಿನಗಳು (25:1-11)
Q. ಇಸ್ಮಾಯೇಲನ ಸಂತಾನದವರು (25:12-18)

III. ಇಸಾಕನ ಕಥಾನಿರೂಪಣೆ (25:19-28:9)

A. ಏಸಾವ ಮತ್ತು ಯಾಕೋಬರ ಜನನ (25:19-26)
B. ಏಸಾವನ ಚೊಚ್ಚಲು ಹಕ್ಕಿಗಾಗಿ ಆತನೊಂದಿಗೆ ಯಾಕೋಬನು ಚೌಕಾಸಿ ಮಾಡಿದ್ದು (25:27-34)
C. ಇಸಾಕನು ಫಿಲಿಷ್ಟಿಯರ ಮಧ್ಯ ವಾಸಿಸಿದ್ದು (26:1-33)
D. ಏಸಾವನು ಹಿತ್ತೀಯರ ಹೆಂಗಸರನ್ನು ಹೆಂಡತಿಯರನ್ನಾಗಿ ಮಾಡಿಕೊಂಡದ್ದರಿಂದ ಇಸಾಕ ಮತ್ತು ರೆಬೆಕ್ಕಳಿಗಾದ ವೇದನೆ (26:34, 35)
E. ಯಾಕೋಬನು ಏಸಾವನ ಆಶೀರ್ವಾದವನ್ನು ಕದ್ದುಕೊಂಡಿದ್ದು (27:1-45)
F. ಹಾರಾನಿಗೆ ಹೋಗುವ ಮುನ್ನ ಇಸಾಕನು ಯಾಕೋಬನಿಗೆ ನೀಡಿದ ಆದೇಶ (27:46-28:5)

G. ಇಸಾಕನನ್ನು ಮೆಚ್ಚಿಸುವದಕ್ಕೆ ಏಸಾವನು ತಡವಾಗಿ ಮದುವೆಯಾದದ್ದು (28:6-9)

IV. ಯಾಕೋಬನ ಕಥಾನಿರೂಪಣೆ (28:10-36:43)
  A. ಬೇತೇಲಿನಲ್ಲಿ ಯಾಕೋಬ: ಒಂದು ದೇವಪ್ರತ್ಯಕ್ಷತೆ ಮತ್ತು ಒಂದು ಹರಕೆ (28:10-22)
  B. ಯಾಕೋಬನ ಮದುವೆಗಳು (29:1-30)
  C. ಲೇಯ ಮತ್ತ ರಾಹೇಲಳ ನಡುವಿನ ವೈರತ್ವ (29:31-30:24)
  D. ಮಂದೆಗಳಿಗೋಸ್ಕರ ಯಾಕೋಬನು ಲಾಬಾನನ ಸಂಗಡ ಕೆಲಸದ ಒಪ್ಪಂದ ಮಾಡಿಕೊಂಡಿದ್ದು (30:25-43)
  E. ಲಾಬಾನನಿಂದ ಯಾಕೋಬ ಮತ್ತು ಆತನ ಕುಟುಂಬವು ಬೇರ್ಪಟ್ಟದ್ದು (31:1-55)
  F. ಇಪ್ಪತು ವರ್ಷಗಳ ಬಳಿಕ ಏಸಾವ ಮತ್ತು ಯಾಕೋಬರ ನಡುವೆ ಪುನರ್ಮಿಲನವಾದದ್ದು (32:1-33:17)
  G. ಯಾಕೋಬ ಮತ್ತು ಆತನ ಕುಟುಂಬವು ಶೆಕೆಮಿಗೆ ಸ್ಥಳಾಂತರಗೊಂಡಿದ್ದು (33:18-34:31)
  H. ಬೇತೇಲಿಗೆ ಹಿಂದಿರುಗಿದ್ದು (35:1-15)
  I. ಬೇತೇಲಿನ ತರುವಾಯ (35:16-29)
  J. ಏಸಾವನ ಸಂತತಿಯವರು (36:1-43)

V. ಯೋಸೇಫ ಕಥಾನಿರೂಪಣೆ (37:1-50:26)
  A. ಕಾನಾನ್ ದೇಶದಲ್ಲಿ ಯೋಸೇಫನು (37:1-36)
  B. ಯೆಹೂದನು ಮತ್ತು ಆತನ ಸೊಸೆಯಾದ ತಾಮರಳು (38:1-30)
  C. ಪೋಟೀಫರನ ಮನೆಯಲ್ಲಿ ಒಬ್ಬ ಗುಲಾಮನಾಗಿ ಯೋಸೇಫ (39:1-23)
  D. ಯೋಸೇಫನು ಸೆರೆಮನೆಯಲ್ಲಿ ಹಾಕಲ್ಪಟ್ಟಿದ್ದು (40:1-23)
  E. ಫರೋಹನ ಗೂಢಾರ್ಥದ ಕನಸುಗಳು (41:1-57)
  F. ಐಗುಪ್ತದಲ್ಲಿ ಯೋಸೇಫನ ಸಹೋದರರು (42:1-38)
  G. ಸಹೋದರರು ಐಗುಪ್ತಕ್ಕೆ ಹಿಂದಿರುಗುತ್ತಾರೆ (43:1-34)
  H. ಸಂಕಷ್ಟದಲ್ಲಿ ಬೆನ್ಯಾಮೀನನು (44:1-34)
  I. ಯೋಸೇಪನು ತನ್ನ ಸಹೋದರರೊಂದಿಗೆ ಪುನರ್ಮಿಲನಗೊಂಡಿದ್ದರು (45:1-28)
  J. ಯಾಕೋಬನ ಕುಟುಂಬವು ಐಗುಪ್ತಕ್ಕೆ ವಲಸೆ ಬಂದಿದ್ದು (46:1-47:12)
  K. ಬರಗಾಲದ ಮುಂದುವರೆಯುವಿಕೆ (47:13-26)
  L. ಯಾಕೋಬನ ಕೊನೆಯ ದಿನಗಳು (47:27-48:22)
  M. ಯಾಕೋಬನು ಮರಣದ ಹಾಸಿಗೆಯಲ್ಲಿ ತನ್ನ ಪುತ್ರರನ್ನು ಆಶೀರ್ವದಿಸಿದ್ದು (49:1-27)
  N. ಯಾಕೋಬನ ಮರಣ ಹಾಗೂ ಹೂಣಲ್ಪಡುವಿಕೆ (49:28-50:14)

O. ಯೋಸೇಫನ ಕೊನೆಯ ವರ್ಷಗಳು (50:15-26)

## ಅಡಿಟಿಪ್ಪಣಿಗಳು

[1]ಸೆಪ್ಟುಜಿಂಟ್ ಎಂಬುದು ಇಬ್ರಿಯ ಶಾಸ್ತ್ರಗಳ ಗ್ರೀಕ್ ಅನುವಾದವಾಗಿರುತ್ತದೆ. ಅದನ್ನು ಸಾಮಾನ್ಯವಾಗಿ "LXX" ಎಂದು ಕರೆಯಲಾಗುತ್ತದ, ಅದರರ್ಥವು "ಎಪ್ಪತ್ತು," ಈ ಅನುವಾದವನ್ನು ಕ್ರಿ.ಪೂ. 250ರಲ್ಲಿ ಅಲೆಗ್ಸಾಂದ್ರಿಯದಲ್ಲಿದ್ದ ಎಪ್ಪತ್ತು ಮಂದಿ ಪಂಡಿತರು ಮಾಡಿದ್ದರು. [2]Mishnah *Aboth* 1.1. [3]Marc Zvi Brettler, "Torah," in *The Jewish Study Bible*, ed. Adele Berlin and Marc Zvi Brettler (New York: Oxford University Press, 2004), 2–3. [4]ನೋಡಿರಿ 1 ಅರಸು 2:3; 2 ಅರಸು 14:6; 23:25; 2 ಪೂರ್ವಕಾಲವೃತ್ತಾಂತ 23:18; 25:4; 30:16; 35:12; ಎಜ್ರನು 3:2; 6:18; ನೆಹಮೀಯ 8:1; 13:1. ಹೊಸ ಒಡಂಬಡಿಯು ಮೋಶೆಯ ಕುರಿತಾಗಿ ಅದೇ ರೀತಿಯ ಉಲ್ಲೇಖಗಳನ್ನೊಳಗೊಂಡಿದೆ (ಮಾರ್ಕ 12:26; ಲೂಕ 2:22; 24:44; ಯೋಹಾನ 1:45; 7:23; ಅಪೊಸ್ತಲರ ಕೃತ್ಯಗಳು 13:39; 15:5; 28:23; 1 ಕೊರಿಂಥ 9:9; ಮತ್ತು ಇತರ ವಾಕ್ಯಭಾಗಗಳು). [5]ಮೋಶೆ ಮತ್ತು ವಿಮೋಚನೆಯ ಯಾತ್ರೆಯು ನಡೆದ ಕಾಲಕ್ಕೆ ಎರಡು ದಿನಾಂಕಗಳನ್ನು ಸೂಚಿಸಲಾಗಿದೆ: ಆರಂಭಿಕ ದಿನಾಂಕವೆಂದರೆ ಕ್ರಿ.ಪೂ. 1445, ಮತ್ತು ಅನಂತರದ ದಿನಾಂಕವೆಂದರೆ ಕ್ರಿ.ಪೂ. 1290. ಪ್ರತಿಯೊಂದು ದಿನಾಂಕದ ಸಾಧಕ ಮತ್ತು ಬಾಧಕಗಳ ಕುರಿತಾದ ಒಂದು ಚರ್ಚೆಯು ವಿಮೋಚನಕಾಂಡದಲ್ಲಿನ ಐತಿಹಾಸಿಕ ಘಟನೆಗಳ ಕುರಿತ ಅಧ್ಯಯನಕ್ಕೆ ಸೂಕ್ತವಾಗಿ ಸರಿಹೊಂದುವದಾಗಿದೆ. ನೋಡಿರಿ Alfred J. Hoerth, *Archaeology and the Old Testament* (Grand Rapids, Mich.: Baker Books, 1998), 57–59; K. A. Kitchen, *On the Reliability of the Old Testament* (Grand Rapids, Mich.: Wm. B. Eerdmans Publishing Co., 2003), 307–10; and Coy D. Roper, *Exodus*, Truth for Today Commentary (Searcy, Ark.: Resource Publications, 2008), 656–59. [6]ಈ ಮೂಲಗಳು ತಲೆಮಾರಿನ ಕಥನಗಳನ್ನು ಒಳಗೊಂಡಿರಬಹುದು (ನೋಡಿರಿ ಪುಟಗಳು 4-5). [7]ಪ್ರೇರಿತವಲ್ಲದ ವಾಕ್ಯದಲ್ಲಿ ಯಾವಾತನ ಬಗ್ಗೆ ಬರೆಯಲಾಗಿದೆಯೋ ಆತನು ಆದಿ ಯೆಹೂದಿ ಸಂಪ್ರದಾಯಕ್ಕೆ ಸೇರಿದ ಎಜ್ರನು ಎಂಬುದಾಗಿ ಕೆಲವರು ಅನುಮಾನಿಸುತ್ತಾರೆ: 2 Esdras 14:42-48 ಹೇಳುವದೇನೆಂದರೆ ದೇವರು ಎಜ್ರನಿಗೆ ಮತ್ತು ಇತರ ಐದು ಜನರಿಗೆ ತೊಂಭತ್ತುನಾಲ್ಕು ಪುಸ್ತಕಗಳನ್ನು ಬರೆಯುವಂತೆ ಆಜ್ಞಾಪಿಸಿದನು ಮತ್ತು "ಮೊದಲ ಇಪ್ಪತ್ತನಾಲ್ಕು ಪುಸ್ತಕಗಳನ್ನು ಬಯಲುಗೊಳಿಸಬೇಕು" ಎಂಬದೆ (ಲೆಕ್ಕ ಮಾಡುವ ಒಂದು ಸಂಪ್ರದಾಯಿಕ ವಿಧಾನದ ಪ್ರಕಾರ, ಇಬ್ರಿಯ ಕ್ಯಾನೋನಿನಲ್ಲಿರುವ ಪುಸ್ತಕಗಳ ಸಂಖ್ಯೆಯ ಇದಾಗಿದೆ). [8]ಅಬ್ರಾಮನ ಹೆಸರನ್ನು ದೇವರು "ಅಬ್ರಹಾಮ" ಎಂದು ಬದಲಿಸಿದನು (17:5), ಆತನು ಒಂದು ಜನಸಮೂಹಕ್ಕೆ ಪಿತೃವಾಗುವನೆಂದು ಅದರಿಂದ ಸೂಚಿಸಿದನು. ಈ ವ್ಯಾಖ್ಯಾನ ಗ್ರಂಥದುದ್ದಕ್ಕೂ ಆತನಿಗಾಗಿ ಬಳಸಲ್ಪಡುವದು ಎರಡನೆಯ ಹೆಸರು ಆಗಿರುತ್ತದೆ. [9]ಕ್ರಿ.ಪೂ. 925ರಲ್ಲಿನ ಐಗುಪ್ತದ ಶೊಶೆಂಕ (ಶಿಶಾಕ್) ಪಟ್ಟಿಯಲ್ಲಿ ಒಂದು ಸಂಭಾವ್ಯವಾದ ವಿನಾಯಿತಿಯು ಕಂಡು ಬರುವದಾಗಿದ್ದು ಅದು "ಅಬ್ರಾಮನ ಆವರಣ" ಎಂದಿರುತ್ತದೆ, ನೆಗೆವ್ ಎಂಬ ಸ್ಥಳವನ್ನು ಸೂಚಿಸುವದಾಗಿದೆ (ಇಸ್ರಾಯೇಲಿನ ದಕ್ಷಿಣಭಾಗದ ಮರುಭೂಮಿ), ಆದರೆ ಅದನ್ನು "ಬೀಜದ ಕುದುರೆಗಳ ಆವರಣ" ಎಂದು ಅನುವಾದಿಸಬಹುದಾಗಿದೆ. ಹೇಗೂ, K. A. Kitchen ಗಮನಕ್ಕೆ ತರುವ ಹಾಗೆ, "ಈ ಸ್ಥಳವು ಇದ್ದಂಥ ನೆಗೆವ್ ಪ್ರಾಂತ್ಯವು ನಿಖರವಾಗಿ ಕುದುರೆಗಳಿಗೆ ಹೆಸರುವಾಸಿಯಾಗಿರಲಿಲ್ಲ" (Kitchen, *Reliability*, 313). [10]Hoerth, 142.

[11]K. A. Kitchen, *Ancient Orient and Old Testament* (Chicago: Inter-Varsity Press, 1966), 48–49; Gordon J. Wenham, *Genesis 16—50*, Word Biblical Commentary, vol. 2 (Dallas: Word Books, 1994), xxiii. [12]Kitchen, *Reliability*, 341–42. [13]Wenham, 175–76. [14]ಅಬ್ರಹಾಮನು ನುಝಿ ಕಲ್ಲಿನ ಹಲಿಗೆಗಳಿಗಿಂತಲೂ (ಕ್ರಿ.ಪೂ. ಹದಿನೈದನೆ ಶತಮಾನ) ಹಲವು ನೂರು ವರ್ಷಗಳ ಮುಂಚೆಯೇ ಜೀವಿಸಿದ್ದನಾದರೂ, ಎರಡನೆಯ ಸಹಸ್ರಮಾನದ ವೇಳೆಯಲ್ಲಿ ಪ್ರಾಚೀನ ಮೆಸಪೊತಾಮ್ಯದ ನಿಷ್ಕ್ರಿಯ ಸ್ಥಿತಿಯು ಬಹುಶಃ ಅವುಗಳ ರಚನೆಯ ಕಾಲದ ಮುಂಚೆ ಮತ್ತು ಅನಂತರದಲ್ಲಿನ ಅನೇಕ ವರ್ಷಗಳಲ್ಲಿದ್ದ ಸಾಂಸ್ಕೃತಿಕ ಆಚಾರಗಳನ್ನು ಪ್ರತಿಫಲಿಸುವದಾಗಿರಬಹುದು ಎಂದರ್ಥವಾಗಿದೆ. (Hoerth, 102–3, n. 1.) [15]ಆದಿಕಾಂಡದಲ್ಲಿರುವ ಧಾರ್ಮಿಕ ಚರ್ಚೆಯಾಂಶಗಳ ವಿಶ್ವಕೋಶೀಯ ವಿಭಾಗಕ್ಕಿಂತಲೂ ಅಧಿಕವಾಗಿ - ಉದಾಹರಣೆಗೆ ದೇವರು, ಸೃಷ್ಟಿ, ಮನುಷ್ಯ, ಪಾಪ, ಕೃಪೆ, ಮತ್ತು ಇತ್ಯಾದಿ - ಈ ವಿಭಾಗವು ವಿವಿಧ ಅಧ್ಯಾಯದ ಶಿರೋನಾಮೆಗಳಲ್ಲಿ ಅಥವಾ ಬೃಹತ್ ವಿಷಯಗಳ ಅಂಕಣಗಳಲ್ಲಿ ಕಾಣಿಸಿಕೊಳ್ಳುವ ವೇಳೆ ಆ ಪುಸ್ತಕದಲ್ಲಿರುವ ಧಾರ್ಮಿಕ ಉಪದೇಶಗಳ ಕುರಿತಾದ ಕ್ಲುಪ್ತ ಚರ್ಚೆಯನ್ನು ಒದಗಿಸುತ್ತದೆ. ವಿನ್ಯಾಸ ಮತ್ತು ವ್ಯಾಖ್ಯೆಗಳಿಗಾಗಿ ಕೆಲವೊಂದು ವಿಚಾರಗಳನ್ನು Clyde T. Francisco, "Genesis," in *The Broadman Bible Commentary*, vol. 1, *General Articles, Genesis—Exodus*, rev. ed., ed. Clifton J. Allen (Nashville: Broadman Press, 1969), 115–16ದಿಂದ ಆರಿಸಿಕೊಳ್ಳಲಾಗಿದೆ. [16]ಅಬ್ರಹಾಮನು ಖಾರಾನ್ ಪಟ್ಟಣವನ್ನು ಬಿಟ್ಟು ಹೊರಟಾಗ ಎಪ್ಪತ್ತೈದು ವರ್ಷದವನಾಗಿದ್ದನು (12:4), ಮತ್ತು ಆತನು ಸಾರಳಿಗಿಂತಲೂ

ಹತ್ತು ವರ್ಷ ದೊಡ್ಡವನಾಗಿದ್ದನು, ಆಕೆಯು ತೊಂಭತ್ತು ವಯಸ್ಸಿನವಳು ಮತ್ತು ಅಬ್ರಹಾಮನು ನೂರು ವಯಸ್ಸಿನಾಗಿದ್ದ ವೇಳೆ ಇಸಾಕನನ್ನು ಹಡೆದಳು (17:17; 21:5). ಸಾರಳು 127 ವಯಸ್ಸಿನಲ್ಲಿ ಮರಣಿಸಿದ ವೇಳೆ (23:1), ಅಬ್ರಹಾಮನಿಗೆ 137 ವಯಸ್ಸಾಗಿದ್ದವು, ಮತ್ತು ಈಗ ಆತನು ಖಾರಾನ್ ಬಿಟ್ಟು ಬಂದು ಅರವತ್ತೇರಡು ವರ್ಷಗಳಾಗಿದ್ದವು. [17]ಐವತ್ತುಕ್ಕೂ ಅಧಿಕ ವರ್ಷಗಳ ಮುಂಚೆ, ಆತನು ತನ್ನ ಮನೆಯಲ್ಲಿ ಹುಟ್ಟಿದ್ದ (ಬಹುಶಃ ಗುಲಾಮರಾಗಿ ಹುಟ್ಟಿದವರು; 14:14) 318 ಜನರನ್ನು ಯುದ್ಧವೀರರನ್ನಾಗಿ ಸಜ್ಜುಗೊಳಿಸಿದ್ದನು. ಈ ಹೊತ್ತಿಗಾಗಲೇ, ಆತನ ಬಳಿಯಲ್ಲಿ ಅವಶ್ಯವಾದರೆ ಕಾದಾಟವನ್ನು ನಡಿಸುವದಕ್ಕೆ ಶಕ್ತರಾಗಿದ್ದ ಇನ್ನೂ ಎಷ್ಟೋ ಜನ ಸೇವಕರು/ಗುಲಾಮರು ಇದ್ದರು.